ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಹರಪನಹಳ್ಳಿ ವಿಜಯನಗರ ಜಿಲ್ಲೆ

# ಪಾಠ ಯೋಜನೆ

## (ಕಲಿಕಾ ಫಲ ಆಧಾರಿತ)

### ಪ್ರಥಮ ಭಾಷೆ ಸಿರಿ ಕನ್ನಡ

### 9ನೇ ತರಗತಿ







ಬಸವರಾಜ ಟಿ.ಎಂ ಕನ್ನಡ ಭಾಷಾ ಶಿಕ್ಷಕರು

# ಪಾಠ ಯೋಜನೆ

## (ಕಲಿಕಾ ಫಲ ಆಧಾರಿತ)

**ಪ್ರಥಮ ಭಾಷೆ ಸಿರಿ ಕನ್ನಡ**

**9ನೇ ತರಗತಿ**








# ಕಲಿಕಾ ಫಲ–1

**ಸ್ಥಳೀಯ ಸಾಮಾಜಿಕ ಮತ್ತು ಪ್ರಾಕೃತಿಕ ಸನ್ನಿವೇಶದಲ್ಲಿನ ಅಂಶಗಳನ್ನು ವಿಶ್ಲೇಷಿಸಿ ತಾರ್ಕಿಕವಾಗಿ ಉತ್ತರಿಸುತ್ತಾರೆ. ಉದಾ:– ವರದಕ್ಷಿಣೆಯ ಪರಿಣಾಮಗಳು, ಧೂಮಪಾನದಿಂದಾಗುವ ದುಷ್ಪರಿಣಾಮಗಳು.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | ಸ್ಥಳೀಯ ಸಮಾಜದಲ್ಲಿ ಕಂಡಂತಹ ಘಟನೆಗಳ ಕುರಿತು ತಾರ್ಕಿಕವಾಗಿ ಆಲೋಚಿಸಿ ನಿರ್ಧರಿಸಲು ಹಾಗೂ ಉತ್ತಮ ನಾಗರಿಕನಾಗಲು ಪ್ರೇರೇಪಿಸುವುದು. ಆಲಿಸಿದ, ನೋಡಿದ ವಿಷಯ, ವಸ್ತುಗಳ ಬಗ್ಗೆ ಮಾತನಾಡುತ್ತಾ, ಪ್ರಶ್ನಿಸುತ್ತಾ, ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ, ತನ್ನ ಮಾತಿಗೆ ತಾರ್ಕಿಕ ಕಾರಣ ನೀಡಿ ತರ್ಕ ಮಾಡಿ ನಿರ್ಣಯ ತೆಗೆದುಕೊಳ್ಳುವ, ಆಲೋಚನೆಗಳನ್ನು ದೃಢಪಡಿಸಿಕೊಳ್ಳಲು ಸಾಧ್ಯವಾಗುವಂತಹ ಸನ್ನಿವೇಶವನ್ನು ಮೂಡಿಸುವುದು. | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಘೋಷಣಾ ವಾಕ್ಯಗಳ ಪಟ್ಟಿ. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ – ಸಾಧನಗಳು | ಮೌಲ್ಯಮಾಪನ – ತಂತ್ರಗಳು | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | **ಚಟುವಟಿಕೆ:1** ನಮ್ಮ ಚಿತ್ರಕ್ಕೆ ನಿಮ್ಮ ತರ್ಕ | ಸ್ಥಳೀಯ ಸಾಮಾಜಿಕ ಮತ್ತು ಪ್ರಾಕೃತಿಕ ಸನ್ನಿವೇಶದಲ್ಲಿನ ಒಳಿತು ಕೆಡಕುಗಳನ್ನು ಚರ್ಚಿಸುವುದು. | ತರಗತಿಯ ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಿ, ಪ್ರತಿಯೊಂದು ಗುಂಪಿಗೂ ಈ ಕೆಳಗಿನ ಎರಡು ಚಿತ್ರಗಳನ್ನು ನೀಡುವುದು. ಕೆಲವು ಪ್ರಶ್ನೆಗಳನ್ನು ಕೇಳುತ್ತಾ, ನಂತರ ವಿದ್ಯಾರ್ಥಿಗಳನ್ನು 'ಪರ ಮತ್ತು ವಿರೋಧದಂತೆ' ತಂಡದಲ್ಲಿ ಚರ್ಚಿಸಲು ಚಟುವಟಿಕೆಯನ್ನು ನೀಡುವುದು.   | ಕಲಿಕಾ ಹಾಳೆ ಅಭ್ಯಾಸ 1.1 | ಅವಲೋಕನ | |
| | **ಚಟುವಟಿಕೆ:2** ಸ್ಥಳೀಯ ಸಮಸ್ಯೆಗಳ ಬಗ್ಗೆ ಚಿಂತಿಸೋಣ | ಸ್ಥಳೀಯ ಸಮಸ್ಯೆಗಳನ್ನು ವಿಶ್ಲೇಷಿಸಿ, ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಕೌಶಲವನ್ನು ಬೆಳೆಸುವುದು. | ಮಕ್ಕಳನ್ನು ಮೂರು ತಂಡಗಳನ್ನಾಗಿ ಮಾಡಿ ಪ್ರತಿಯೊಂದು ತಂಡಕ್ಕೂ ಒಂದೊಂದು ಸಾಮಾಜಿಕ ಮತ್ತು ಪ್ರಾಕೃತಿಕ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಚಿತ್ರಪಟಗಳನ್ನು ಗಮನಿಸುವಂತೆ ಸೂಚಿಸುವುದು.    ಮೇಲಿನ ಚಿತ್ರಗಳಲ್ಲಿ ಗಮನಿಸಿದ ಪ್ರಮುಖಾಂಶಗಳೇನು? ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲೆ ಉಂಟಾಗುತ್ತಿರುವ ಪರಿಣಾಮವೇನು? • ಪ್ರಕೃತಿ ನಾಶವಾಗಲು ಮಾನವನ ಕೈವಾಡ ಹೆಚ್ಚಿದೆ ಎಂಬುದನ್ನು ನೀವು ಒಪ್ಪುವಿರಾ? ಚರ್ಚಿಸಿ. • ಈ ಮೇಲಿನ ಚಿತ್ರಗಳಲ್ಲಿನ ಅಪಾಯಗಳನ್ನು ತಪ್ಪಿಸಲು ಏನು ಮಾಡಬಹುದು ಚಿಂತಿಸಿ ಹೇಳಿ. ಮುಂತಾದ ಪ್ರಶ್ನೆಗಳ ಮೂಲಕ ಚಟುವಟಿಕೆ ಮಾಡಿಸುವುದು. ವಿದ್ಯಾರ್ಥಿಗಳು ತಂಡಗಳಲ್ಲಿ ಚರ್ಚಿಸಿದ ಅಂಶಗಳನ್ನು ಮಂಡಿಸಲು ಅವಕಾಶ ನೀಡುವುದು. ಹಾಗೂ ಇತರ ಗುಂಪಿನವರು ಇದಕ್ಕೆ ಸಂಬಂಧಿಸಿದಂತೆ ಅಭಿಪ್ರಾಯಗಳನ್ನು ತಿಳಿಸುವುದು. | ಕಲಿಕಾ ಹಾಳೆ ಅಭ್ಯಾಸ 2.1 ರಿಂದ 2.3 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ–3:** ವರದಿ ಓದಿ ಚರ್ಚಿಸೋಣ | ಚರ್ಚೆಯ ಮೂಲಕ ತಾರ್ಕಿಕ ಆಲೋಚನೆ ಬೆಳೆಸುವುದು. | ಎಲ್ಲರೂ ಒಂದೊಂದು ಪತ್ರಿಕೆಯ ಭಾಗಗಳನ್ನು ಸಂಗ್ರಹಿಸಿಕೊಂಡು ಬರುವಂತೆ ತಿಳಿಸುವುದು. ಅಥವಾ ಶಾಲೆಯಲ್ಲಿರುವ ಹಿಂದಿನ ದಿನಪತ್ರಿಕೆಗಳನ್ನು ಮತ್ತು ಬಾಲಪತ್ರಿಕೆಗಳನ್ನು ನೀಡಿ, ಒಂದೊಂದು ವರದಿಯನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸುವುದು.<br>ಹಂತ–1: ಈ ಕೆಳಗಿನ ವರದಿಯನ್ನು ಎಲ್ಲಾ ವಿದ್ಯಾರ್ಥಿಗಳು ಓದಲು ಸೂಚಿಸಿ, ಸಮಯವನ್ನು ನೀಡುವುದು. ನಂತರ ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆಗೆ ಅವಕಾಶವನ್ನು ಮಾಡಿಕೊಡುವುದು.<br>* ಮನೆಯಲ್ಲಿ ಶೌಚಾಲಯ ಇಲ್ಲದಿರುವುದರಿಂದ ಆಗುವ ಪರಿಣಾಮಗಳೇನು? ಚರ್ಚಿಸಿ ಬರೆಯಿರಿ. ಶೌಚಾಲಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಏನು ಮಾಡಬಹುದು? ವಿದ್ಯಾರ್ಥಿಗಳು ಅಭ್ಯಾಸ ಹಾಳೆಯಲ್ಲಿ ಬರೆದ ನಂತರ ಅದನ್ನು ತರಗತಿಯಲ್ಲಿ ಮಂಡಿಸಲು ಶಿಕ್ಷಕರು ಅವಕಾಶವನ್ನು ಮಾಡಿಕೊಡುವುದು. | ಕಲಿಕಾಹಾಳೆ ಅಭ್ಯಾಸ 3.1 ರಿಂದ 3.3 | ಅವಲೋಕನ | |
| | **ಚಟುವಟಿಕೆ:4** ಜಾಗೃತಿ ಮೂಡಿಸೋಣ | ಸಾಮಾಜಿಕ ಮತ್ತು ಪ್ರಾಕೃತಿಕ ವಿಷಯಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವುದು. | ವಿದ್ಯಾರ್ಥಿಗಳಿಗೆ ಕೆಲವು ಘೋಷಣಾ ವಾಕ್ಯಗಳನ್ನು ನೀಡುವುದು. ವಿದ್ಯಾರ್ಥಿಗಳು ಅದಕ್ಕೆ ಸಂಬಂಧಿಸಿದಂತೆ ಚಿತ್ರಗಳನ್ನು ಸಂಗ್ರಹಿಸಿ ಅಥವಾ ಚಿತ್ರ ಬಿಡಿಸಿ ಸೂಕ್ತವಾದ ವಾಕ್ಯಗಳನ್ನು ಬರೆದು, ಅದನ್ನು ಶಾಲೆಯಲ್ಲಿ ಪ್ರದರ್ಶಿಸಿ, ಗ್ರಾಮದ ಅಥವಾ ಪಟ್ಟಣದ ಸೂಕ್ತವಾದ ಸ್ಥಳಗಳಲ್ಲಿ ಅಂಟಿಸಲು ಶಿಕ್ಷಕರು ಮಾರ್ಗದರ್ಶನ ಮಾಡುವುದು. | ಕಲಿಕಾಹಾಳೆ ಅಭ್ಯಾಸ 4.1 ಮತ್ತು 4.2 | ಅವಲೋಕನ | |
| | **ಚಟುವಟಿಕೆ: 5** ಪದ್ಯ ಓದೋಣ – ಗಿಡ ಮರಗಳ ಮಹತ್ತ್ವ ಅರಿಯೋಣ. | ಸಾಮಾಜಿಕ ಮತ್ತು ಪ್ರಾಕೃತಿಕ ಅಂಶಗಳ ಸಹಸಂಬಂಧವನ್ನು ತಿಳಿಸುವುದು. | ಶಿಕ್ಷಕರು 7ನೇ ತರಗತಿಯ ಸತ್ಯಾನಂದ ಪಾತ್ರೋಟರವರು ಬರೆದ 'ಗಿಡಮರ' ಪದ್ಯವನ್ನು ಬಳಸುವರು. ಮೊದಲು ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಸದರಿ ಪದ್ಯಕ್ಕೆ ಸಹ ಸಂಬಂಧೀಕರಿಸಲು ಪ್ರಶ್ನೆಗಳನ್ನು ಕೇಳುತ್ತಾ ಚರ್ಚಿಸುವರು. ಪ್ರಶ್ನೆಗಳನ್ನು ಕೇಳಿ ಚರ್ಚಿಸುತ್ತಾ, ನಂತರ ತರಗತಿ ವಿದ್ಯಾರ್ಥಿಗಳನ್ನು 4 ಗುಂಪುಗಳನ್ನಾಗಿ ವಿಂಗಡಸಿ, ಪ್ರತೀ ಗುಂಪಿಗೂ ಅಭ್ಯಾಸ 5.1 ರಲ್ಲಿರುವ 'ಗಿಡ–ಮರ' ಪದ್ಯವನ್ನು ಕೊಡುವರು. ಮೊದಲೆರಡು ಗುಂಪಿಗಳಿಗೆ ಮರದ ಒಳ್ಳೆಗುಣಗಳನ್ನು, ಉಳಿದೆರಡು ಗುಂಪುಗಳಿಗೆ ಮನುಷ್ಯನ ಸ್ವಾರ್ಥಗುಣಗಳನ್ನು, ಪದ್ಯವನ್ನು ಓದಿ ಪಟ್ಟಿ ಮಾಡಲು ಸೂಚಿಸುವರು. ನಂತರ ಪ್ರತಿ ಗುಂಪಿನಿಂದ ಒಬ್ಬರು ಮಂಡಿಸಲು ಅವಕಾಶ ನೀಡುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 5.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾಹಾಳೆಯಲ್ಲಿನ ಅಭ್ಯಾಸ–6ರಲ್ಲಿನ ರಂಗಣ್ಣ ಮತ್ತು ಸುಂದ್ರಮ್ಮನವರ ಕಥೆಯನ್ನು ಬಳಸಿ ಮೌಲ್ಯಮಾಪನ ಮಾಡುವುದು.

**ನಿಯೋಜಿತ ಕಾರ್ಯಗಳು :** ಘೋಷಣಾ ವಾಕ್ಯಗಳು ಮತ್ತು ಪ್ರಾಕೃತಿಕ ಅಂಶಗಳನ್ನು ಒಳಗೊಂಡಿರುವ ಪದ್ಯಗಳನ್ನು, ಗಾದೆ, ನುಡಿಗಟ್ಟುಗಳನ್ನು ಸಂಗ್ರಹಿಸಿಕೊಂಡು ಬರಲು ವಿದ್ಯಾರ್ಥಿಗಳಿಗೆ ನಿಯೋಜಿತ ಕಾರ್ಯವನ್ನು ನೀಡುವುದು.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–2

**ಇತರರ ವಿಚಾರ, ಸಂಭಾಷಣೆ ಅಭಿಪ್ರಾಯಗಳನ್ನು ಮತ್ತು ಸ್ವಂತ ಅನುಭವಗಳನ್ನು ತನ್ನದೆ ಆದ ಶೈಲಿಯಲ್ಲಿ ಬರೆಯುತ್ತಾರೆ.**

| | | | | | | |
|---|---|---|---|---|---|---|
| **9ನೇ ತರಗತಿ** | **ವಿಷಯ** | **ಪ್ರಥಮ ಭಾಷೆ ಕನ್ನಡ** | **ಪ್ರಾರಂಭ ದಿನಾಂಕ** | | **ಮುಕ್ತಾಯ ದಿನಾಂಕ** | |
| **ಉದ್ದೇಶಗಳು** | ಸಮಾಜದಲ್ಲಿ ವ್ಯಕ್ತವಾಗುವ ವಿಚಾರ, ಅಭಿಪ್ರಾಯ, ಸಂಭಾಷಣೆಗಳಲ್ಲಿ ವ್ಯಕ್ತವಾಗಿರುವ ಶೈಲಿಯನ್ನು ತಮ್ಮ ಬರವಣಿಗೆಯಲ್ಲಿ ಸೃಜನಾತ್ಮಕವಾಗಿ, ತಾರ್ಕಿಕವಾಗಿ, ವಿಮರ್ಶಾತ್ಮಕವಾಗಿ, ಸಾರಾಂಶೀಕರಿಸಿ ವ್ಯಕ್ತಪಡಿಸುವ ಕೌಶಲವನ್ನು ಬೆಳೆಸುವುದು. | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಘೋಷಣಾ ವಾಕ್ಯಗಳ ಪಟ್ಟಿ, 9ನೇ ತರಗತಿ ಪಠ್ಯ ಪುಸ್ತಕ. | | | | | |
| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
| | | | | **ಸಾಧನಗಳು** | **ತಂತ್ರಗಳು** | |
| | **ಚಟುವಟಿಕೆ: 1** ಚಿತ್ರ ನೋಡಿ, ಚಿತ್ರದ ಹಿನ್ನೆಲೆ ಗ್ರಹಿಸೋಣ. | ಚಿತ್ರ ನೋಡಿ ಕಲಾವಿದನ ಅನುಭವ, ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು | ವಿದ್ಯಾರ್ಥಿಗಳನ್ನು 2 ಗುಂಪು ಮಾಡುವುದು. ನಂತರ ಪ್ರತಿ ಗುಂಪಿಗೂ ಸೂಕ್ತ ಸೂಚನೆಗಳನ್ನು ಮತ್ತು ಪ್ರಶ್ನೆಗಳನ್ನು ನೀಡಿ, ಗುಂಪಿನಲ್ಲಿ ಚರ್ಚಿಸಿ ಮಂಡನೆಗೆ ಅವಕಾಶವನ್ನು ಮಾಡಿಕೊಡುವುದು.   ಪೂರಕವಾದ ಘೋಷಣಾವಾಕ್ಯ ಮತ್ತು ಕವನಗಳನ್ನು ಸಂಗ್ರಹಿಸಿಕೊಂಡು ಬರಲು ವಿದ್ಯಾರ್ಥಿಗಳಿಗೆ ನಿಯೋಜಿತ ಕಾರ್ಯವನ್ನು ನೀಡುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–1.1 | ಅವಲೋಕನ | |
| | **ಚಟುವಟಿಕೆ: 2** ನುಡಿ ಮುತ್ತುಗಳಿಗೆ ನನ್ನದೊಂದು ಪ್ರತಿಕ್ರಿಯೆ | ನುಡಿಮುತ್ತುಗಳಿಗೆ ಪ್ರತಿಕ್ರಿಯಿಸುವ ಸಾಮರ್ಥ್ಯ ಬೆಳೆಸುವುದು. | ವಿದ್ಯಾರ್ಥಿಗಳನ್ನು ಕುರಿತು ಮನೆಯಲ್ಲಿ, ಶಾಲೆಯಲ್ಲಿ, ಸಮಾಜದಲ್ಲಿ ಮಾತನಾಡುವ ಸಂದರ್ಭದಲ್ಲಿ ಬಳಸುವ ವಿಶೇಷವಾದ ಮಾತು, ನುಡಿಮುತ್ತುಗಳಲ್ಲಿ ನಿಮಗೆ ಇಷ್ಟವಾದುದನ್ನು ಆಯ್ಕೆ ಮಾಡಿಕೊಂಡು ಅದು ಏಕೆ ಇಷ್ಟ? ಎಂಬುದನ್ನು ಎಲ್ಲಾ ವಿದ್ಯಾರ್ಥಿಗಳ ಮುಂದೆ ಹಂಚಿಕೊಳ್ಳಲು ಅವಕಾಶವನ್ನು ನೀಡುವುದು.<br>ನುಡಿಮುತ್ತುಗಳ ಚೀಟಿ ನೀಡಿ ಆಶುಭಾಷಣ ಕಾರ್ಯಕ್ರಮ ಮಾಡುವುದು. ಮೊದಲಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ನುಡಿಮುತ್ತುಗಳಿರುವ ಒಂದೊಂದು ಚೀಟಿಯನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸುವರು. ನಂತರ ಈ ಕೆಳಗಿನ ಸೂಚನೆಗಳನ್ನು ತಿಳಿಸುತ್ತಾ ಎಲ್ಲಾ ವಿದ್ಯಾರ್ಥಿಗಳಿಗೆ 5 ನಿಮಿಷ ಆಲೋಚನೆ ಮಾಡಿ ಬರೆಯಲು ಪ್ರೇರೇಪಿಸುವರು. ನಂತರ ಪ್ರತಿ ವಿದ್ಯಾರ್ಥಿಯು ಬಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಲು ಅವಕಾಶವನ್ನು ಮಾಡಿಕೊಡುವರು. ಪ್ರತಿ ವಿದ್ಯಾರ್ಥಿಯು ನುಡಿಮುತ್ತು ಇರುವ ಚೀಟಿಯೊಂದನ್ನು ಆಯ್ಕೆ ಮಾಡಿಕೊಂಡು, ಆಯ್ಕೆ ಮಾಡಿದ ನುಡಿಮುತ್ತುಗಳಿಗೆ ಕಲಿಕಾ ಹಾಳೆಯಲ್ಲಿನ ಅಭ್ಯಾಸದಲ್ಲಿ ತಮ್ಮ ಅಭಿಪ್ರಾಯ ಬರೆಯಲು ಸೂಚಿಸುವುದು. ಬರೆದಿದ್ದನ್ನು ತರಗತಿಯಲ್ಲಿ ಮಂಡಿಸಿದ ನಂತರ ಹಿಮ್ಮಾಹಿತಿಯನ್ನು ನೀಡುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 ಮತ್ತು 2.2 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ: 3**<br>ಸಂಭಾಷಣೆಯ ಸುತ್ತ ಮುತ್ತ | ನಾಟಕದ ಸಂಭಾಷಣೆಗಳನ್ನು ಅರ್ಥಮಾಡಿಕೊಂಡು ತಮ್ಮದೇ ಶೈಲಿಯಲ್ಲಿ ಬರೆಯುವ ಕೌಶಲವನ್ನು ಬೆಳೆಸಿಕೊಳ್ಳುವುದು. | ತರಗತಿಯ ವಿದ್ಯಾರ್ಥಿಗಳಿಗೆ ಅವರ ಪೂರ್ವಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆ ಮಾಡುವುದು. 1. ನೀವು ಯಾವ ಯಾವ ರೀತಿಯ ನಾಟಕಗಳನ್ನು ನೋಡಿದ್ದೀರಾ? 2. ನೀವು ನೋಡಿರುವ ನಾಟಕದ ಹೆಸರೇನು? 3. ನಾಟಕದಲ್ಲಿ ಇಷ್ಟವಾದ ಪಾತ್ರ ಯಾವುದು? 4. ನೀನು ನೋಡಿದ ನಾಟಕದ ಅನುಭವವನ್ನು ಹಂಚಿಕೊಳ್ಳಿ. ಇತ್ಯಾದಿ<br>ಕಲಿಕಾಹಾಳೆಯಲ್ಲಿನ ಅಭ್ಯಾಸದಲ್ಲಿ ಇರುವ ಈ ಕೆಳಗಿನ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಲು ಸೂಚಿಸುವುದು. ನಂತರ ಚಿತ್ರಕ್ಕೆ ಹೊಂದಿಕೆಯಾಗುವ ಸೂಕ್ತ ಸಂಭಾಷಣೆಯನ್ನು ಬರೆಯಲು ಸೂಚಿಸುವುದು. ನಂತರ ವಿದ್ಯಾರ್ಥಿಗಳು ತರಗತಿಯಲ್ಲಿ ಮಂಡಿಸಿ, ಸ್ವ–ಮೌಲ್ಯಮಾಪನಕ್ಕೆ ಅವಕಾಶ ಮಾಡಿಕೊಡುವುದು.<br><br>ಕಲಿಕಾ ಹಾಳೆಯಲ್ಲಿರುವ 'ಪ್ಲಾಸ್ಟಿಕೋಪಾಖ್ಯಾನ' ಎಂಬ ಕಿರುನಾಟಕವನ್ನು ಬಳಸುವುದು. ನಾಟಕದ ವಸ್ತುವನ್ನು ಇನ್ನು ಚೆನ್ನಾಗಿ ಅರ್ಥಮಾಡಿಸುವ ಸಲುವಾಗಿ ಪ್ರಶ್ನೆಗಳನ್ನು ರೂಪಿಸಿಕೊಂಡು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು. ಉದಾ: ಈ ನಾಟಕದಲ್ಲಿ ಬರುವ ಪಾತ್ರಗಳು ಯಾವುವು? ಪ್ಲಾಸ್ಟಿಕಾಸುರನನ್ನು ಸೃಷ್ಟಿಸಲು ಕಾರಣವೇನು? ಇತ್ಯಾದಿ • ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆಮಾಡಿ ಅಭ್ಯಾಸ ಹಾಳೆಯಲ್ಲಿ ಬರೆಯಲು ಸೂಚಿಸುವುದು. ಪ್ರಶ್ನೆಗಳು: 1. ನಾಟಕದ ಸಂಭಾಷಣೆಯನ್ನು ಗಮನಿಸಿ, ಕಥೆಯಾಗಿ ಪರಿವರ್ತಿಸಿ ಬರೆಯಿರಿ.<br>2. ನಾಟಕದಲ್ಲಿ ಜನರ ನಡುವೆ ನಡೆಯುವ ವಿಚಾರವನ್ನು ಸಂಭಾಷಣೆಯಾಗಿ ಪರಿವರ್ತಿಸಿ ಬರೆಯಿರಿ. ವಿದ್ಯಾರ್ಥಿಗಳು ಬರೆದಿದ್ದನ್ನು ತರಗತಿಯಲ್ಲಿ ಮಂಡಿಸಿದ ನಂತರ ವಿದ್ಯಾರ್ಥಿಗಳು ತಮ್ಮ ಬರೆವಣಿಗೆಯನ್ನು ಉತ್ತಮಪಡಿಸಿಕೊಳ್ಳಲು ಅವಕಾಶವನ್ನು ನೀಡುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ– 3.1 | ಅವಲೋಕನ | |
| | **ಚಟುವಟಿಕೆ: 4**<br>ಕಥೆ ಕೇಳು, ಅನುಭವ ಬರೆದು ಹಂಚಿಕೋ. | ತಮ್ಮ ಸ್ವಂತ ಅನುಭವಗಳನ್ನು ತನ್ನದೇ ಆದ ಶೈಲಿಯಲ್ಲಿ ಬರೆಯುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದು. | ರಾಕ್ಷಸನ ಕಥೆಯನ್ನು ವಿದ್ಯಾರ್ಥಿಗಳಿಗೆ ಮೌಖಿಕವಾಗಿ ಹೇಳುವುದು. ನಂತರ ಅಭ್ಯಾಸ ಹಾಳೆಯಲ್ಲಿ ಸದರಿ ಕಥೆಯನ್ನು ಓದಲು ಅವಕಾಶ ಮಾಡಿಕೊಡುವರು. ನಂತರ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಲು ತಿಳಿಸುವರು. ವಿದ್ಯಾರ್ಥಿಗಳು ಮಂಡಿಸಿದ ಉತ್ತರಗಳನ್ನು ಗಮನಿಸಿ, ಪೂರಕ ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆ ಮಾಡುವುದು.<br>ಕಥೆಯಲ್ಲಿ ಮುಂದೆ ನಡೆದಿರಬಹುದಾದ ಘಟನೆಯನ್ನು ಊಹಿಸಿ, ನಿಮ್ಮದೇ ಆದ ಶೈಲಿಯಲ್ಲಿ ಬರೆದು, ಮಂಡಿಸಿ. ಹಾಗೂ ಕಥೆಗೊಂದು ಸೂಕ್ತವಾದ ಹೆಸರು ಕೊಡಿ. • ಕಥೆಯಲ್ಲಿನ ಪ್ರಸಂಗವೊಂದನ್ನು ಹಾಸ್ಯ ರೂಪಕ್ಕೆ ಪರಿವರ್ತಿಸಿ ಬರೆಯಿರಿ. • ನೀವು ಬೇರೆಯವರಿಂದ ಕೇಳಿದ ಕಥೆಯನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ. | ಕಲಿಕಾಹಾಳೆ ಅಭ್ಯಾಸ 4.1 ಮತ್ತು 4.2 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ: 5** ಪಾಠ ಓದೋಣ – ಚರ್ಚೆ ಮಾಡೋಣ | ವ್ಯಕ್ತಿ ಚಿತ್ರವನ್ನು ಓದಿ ಅರ್ಥಮಾಡಿಕೊಂಡು, ವ್ಯಕ್ತಿಚಿತ್ರವನ್ನು ತಮ್ಮದೇ ಆದ ಶೈಲಿಯಲ್ಲಿ ಬರೆಯುವ ಸಾಮರ್ಥ್ಯವನ್ನು ಬೆಳೆಸುವುದು. | 9ನೇ ತರಗತಿಯ **'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್'** ಎಂಬ ಪಾಠವನ್ನು ಬಳಸುವುದು. • ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ಓದಲು ಅವಕಾಶ ಮಾಡಿಕೊಡುವರು, ಈ ಸಂದರ್ಭದಲ್ಲಿ ಶಿಕ್ಷಕರು ಶಬ್ದಕೋಶ ಬಳಕೆಗೆ ಅವಕಾಶ ಕಲ್ಪಿಸಿ, ಅಗತ್ಯವಿರುವ ಗುಂಪಿಗೆ ಅರ್ಥವನ್ನು ಹೇಳುವರು. • ಕಪ್ಪುಹಲಗೆಯ ಮೇಲೆ ಕೆಳಗಿನ ಪ್ರಶ್ನೆಗಳನ್ನು ಬರೆಯುವರು. ನಂತರ ರಾಧಾಕೃಷ್ಣನ್ ಅವರ ಊರು, ಕುಟುಂಬ ಮತ್ತು ಶಿಕ್ಷಣದ ವಿವರವನ್ನು ಬರೆಯಿರಿ. – ರಾಧಾಕೃಷ್ಣನ್ ಅವರು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಬರೆಯಿರಿ. – ರಾಧಾಕೃಷ್ಣನ್ ಅವರು ರಾಜಕೀಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಬರೆಯಿರಿ. – ರಾಧಾಕೃಷ್ಣನ್ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಕೊಟ್ಟ, ಬೀಳ್ಕೊಡುಗೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. ಈ ಪ್ರಶ್ನೆಗಳನ್ನು ಆಧರಿಸಿ ಮತ್ತೊಮ್ಮೆ ಓದಲು ತಿಳಿಸುವರು. • ಸದರಿ ಪ್ರಶ್ನೆಗಳನ್ನು ಇಟ್ಟುಕೊಂಡು ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ, ತರಗತಿಯಲ್ಲಿ ಮಂಡನೆಗೆ ಅವಕಾಶವನ್ನು ನೀಡುವರು.<br>**ವಿದ್ಯಾರ್ಥಿಗಳಿಗೆ ನಿಯೋಜನ ಕಾರ್ಯವನ್ನು ನೀಡುವುದು.**<br>ರಾಧಕೃಷ್ಣನ್ ಅವರ ಕುರಿತು ಭಾಷಣ ಮಾಡಲು ಈ ಪಾಠವನ್ನು ಓದಿ, ಟಿಪ್ಪಣಿ ತಯಾರು ಮಾಡಿ.<br>ನಿಮ್ಮ ಊರಿನಲ್ಲಿರುವ ಸಾಧಕರ ಬಗ್ಗೆ ವ್ಯಕ್ತಿಚಿತ್ರವೊಂದನ್ನು ಬರೆಯಿರಿ.<br>ನಿಮ್ಮ ನೆಚ್ಚಿನ ಶಿಕ್ಷಕರ ಬಗ್ಗೆ ವ್ಯಕ್ತಿಚಿತ್ರವೊಂದನ್ನು ಬರೆಯಿರಿ. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ 5.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾಹಾಳೆಯಲ್ಲಿನ ಅಭ್ಯಾಸ–6 ರಲ್ಲಿನ **ರಾಮ ಮತ್ತು ಶ್ಯಾಮ** ಎಂಬ ಕಥೆಯನ್ನು ಬಳಸಿಕೊಂಡು ಮೌಲ್ಯಮಾಪನ ಮಾಡುವುದು.

**ನಿಯೋಜಿತ ಕಾರ್ಯಗಳು :** ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಸಂಭಾಷಣೆಯನ್ನು ಗಮನಿಸಿ, ಅದನ್ನು ತಮ್ಮದೇ ಆದ ಶೈಲಿಯಲ್ಲಿ ಬರೆಯಿರಿ.

ಹಿರಿಯರ ಹತ್ತಿರ ಕಥೆಯನ್ನು ಕೇಳಿ, ಅದನ್ನು ಸಂಕ್ಷಿಪ್ತವಾಗಿ ಬರೆಯಿರಿ.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–3

**ಶಬ್ದಕೋಶ, ವಾಚನಾಲಯ, ಅಂತರ್ಜಾಲ, ಮೊದಲಾದವುಗಳ ಸಹಾಯದಿಂದ ಸಾಹಿತ್ಯವನ್ನು ಅರ್ಥೈಸಿಕೊಳ್ಳುತ್ತಾರೆ. ಭಾಷೆಯ ಸೂಕ್ಷ್ಮತೆ, ಪದಪುಂಜ, ಪ್ರಾಸಪದಗಳನ್ನು ಪ್ರಶಂಸಿಸಿ ಬಳಕೆ ಮಾಡುತ್ತಾರೆ.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | ಪುಸ್ತಕದ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಶಬ್ದಕೋಶದ ಬಳಕೆ, ಆ ಪುಸ್ತಕಕ್ಕೆ ಪೂರಕವಾದ ಇತರೆ ಪುಸ್ತಕಗಳ ಓದು, ಆ ವಿಷಯಕ್ಕೆ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲದ ಬಳಕೆ, ವಿವಿಧ ಮೂಲಗಳಿಂದ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವುದು ಹಾಗೂ ಸಾಹಿತ್ಯದಲ್ಲಿನ ಭಾಷೆಯ ಸೂಕ್ಷ್ಮತೆ, ಅಲ್ಲಿನ ಪದಪುಂಜ, ಪ್ರಾಸಪದ ಇತ್ಯಾದಿಗಳನ್ನು ಮೆಚ್ಚಿಕೊಳ್ಳುವುದು ಮತ್ತು ತನ್ನ ಬರವಣಿಗೆಯಲ್ಲಿ ಮತ್ತು ಮೌಖಿಕವಾಗಿ ಬಳಕೆ ಮಾಡಲು ಸಮರ್ಥರಾಗಿರಬೇಕು ಎಂಬುದನ್ನು ಕಲಿಸುವುದು. | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಶಬ್ದಕೋಶಗಳು, ಪ್ರಾಸಪದಗಳ ಪಟ್ಟಿ, ಗ್ರಂಥಾಲಯದ ಪುಸ್ತಕಗಳು, ಪ್ರಶ್ನೆಗಳ ಚಾರ್ಟ್. | | | | | |
| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
| | | | | **ಸಾಧನಗಳು** | **ತಂತ್ರಗಳು** | |
| | **ಚಟುವಟಿಕೆ: 1** ಪುಸ್ತಕ ಓದೋಣ | ಓದಿನ ಅಭಿರುಚಿಯನ್ನು ಬೆಳೆಸುವುದು | ಎಲ್ಲಾ ವಿದ್ಯಾರ್ಥಿಗಳಿಗೂ ಶಾಲಾ ಗ್ರಂಥಾಲಯದಿಂದ ಅಥವಾ ತಮ್ಮ ಸಂಗ್ರಹದಿಂದ ಒಂದೊಂದು ಪುಸ್ತಕವನ್ನು ಸ್ವತಃ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡುವುದು ಹಾಗೂ ಓದುವ ಮತ್ತು ನೋಟ್ ಮಾಡಿಕೊಳ್ಳುವ ಕುರಿತು ಮಾರ್ಗದರ್ಶನ ನೀಡಿ ತರಗತಿಯಲ್ಲಿ ಹಾಗೂ ಮನೆಯಲ್ಲಿ ಓದಲು ಮಾರ್ಗದರ್ಶನ ಮಾಡುವರು ಹಾಗೂ ಪ್ರಶ್ನೆಗಳನ್ನು ಕೇಳುತ್ತಾ ಪುಸ್ತಕದ ಆಳವನ್ನು ಅರಿಯುವಂತೆ ಪ್ರೇರೇಪಿಸುವುದು. | ಕಲಿಕಾ ಹಾಳೆಯ ಅಭ್ಯಾಸ ಹಾಳೆ 1.1 ಮತ್ತು 1.2 | ಅವಲೋಕನ | |
| | **ಚಟುವಟಿಕೆ: 2** ದಿನಕ್ಕೊಂದು ಪುಸ್ತಕ ಪರಿಚಯ | ಪುಸ್ತಕ ಓದಿ ಮಂಡಿಸುವುದು. | ಶಾಲೆಯಲ್ಲಿ ನಡೆಯುವ ಪ್ರಾರ್ಥನೆಯ ಸಂದರ್ಭದಲ್ಲಿ ಅಥವಾ ತರಗತಿಯಲ್ಲಿ ಸರದಿಯಂತೆ ವಿದ್ಯಾರ್ಥಿಗಳು ತಮಗೆ ಇಷ್ಟವಾದ ಪುಸ್ತಕವನ್ನು ಓದಿ, ಪ್ರಮುಖ ಅಂಶಗಳನ್ನು ಬರೆದು ಮಂಡಿಸಲು ಅವಕಾಶವನ್ನು ನೀಡುವುದು. | ಪುಸ್ತಕಗಳು | ಅವಲೋಕನ | |
| | **ಚಟುವಟಿಕೆ: 3** ಓದಿ ಅರ್ಥ ತಿಳಿಯೋಣ | ಶಬ್ದಕೋಶವನ್ನು ಬಳಸುವ ವಿಧಾನ ಮತ್ತು ತನ್ನದೇ ಶಬ್ದಕೋಶವನ್ನು ತಯಾರಿಸುವ ಸಾಮರ್ಥ್ಯ ಬೆಳೆಸುವುದು. | ವಿದ್ಯಾರ್ಥಿಗಳಿಗೆ ಶಬ್ದಕೋಶ ಬಳಸುವ ವಿಧಾನಗಳನ್ನು ಪ್ರಾಯೋಗಿಕವಾಗಿ ತಿಳಿಸಿಕೊಡುವುದು. ನಂತರ ತಮ್ಮದೇ ಆದ ಶಬ್ದಕೋಶವನ್ನು ತಯಾರಿಸಲು ನಿಯೋಜಿತ ಕಾರ್ಯವನ್ನು ನೀಡುವುದು. ಈ ಚಟುವಟಿಕೆಯು ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ. ಪ್ರತಿ ವಿದ್ಯಾರ್ಥಿಯೂ ಹೊಸ ಐದು ಪದಗಳಿಗೆ (ವಾರಕ್ಕೆ ಮೂರು ದಿನಗಳಲ್ಲಿ) ಅರ್ಥವನ್ನು ಹುಡುಕಿ, ತನ್ನದೇ ಆದ ನೋಟ್ ಪುಸ್ತಕದಲ್ಲಿ ಬರೆದುಕೊಂಡು ಬರಲು ತಿಳಿಸುವುದು.<br><br>ಉದಾಹರಣೆಗೆ : **ಪ್ರಕೃತಿ ಕಲಿಸಿದ ಪಾಠ** ಕಥೆಯನ್ನು ವಿದ್ಯಾರ್ಥಿಗಳಿಗೆ ಓದಲು ಅವಕಾಶವನ್ನು ನೀಡುವುದು. ಹೊಸಪದಗಳನ್ನು ಪಟ್ಟಿ ಮಾಡಿಸುವುದು ನಂತರ ಶಬ್ದಕೋಶದಲ್ಲಿ ಪದಗಳ ಅರ್ಥವನ್ನು ಹುಡುಕಿ ಬರೆಯಲು ಸೂಚಿಸುವುದು. ವಿದ್ಯಾರ್ಥಿಗಳೇ ಹುಡುಕಿದ ಅರ್ಥವನ್ನು ಕಥೆಯ ಸಂದರ್ಭಕ್ಕೆ ಅನ್ವಯಿಸಿ ಕಥೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಕ್ಕೆ ಅವಕಾಶ ಮಾಡಿಕೊಡುವುದು ನಂತರ ಕಥೆಯ ಸಾರಾಂಶವನ್ನು ವಿದ್ಯಾರ್ಥಿಗಳ ಜೊತೆ ಚರ್ಚೆ ಮಾಡುವುದು. | ಕಲಿಕಾ ಹಾಳೆಯ ಅಭ್ಯಾಸ 3.1 ಅಭ್ಯಾಸ–3.2 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ: 4** ಅಂತರ್ಜಾಲದ ಲ್ಲೊಂದು ಮಾಹಿತಿ ಹುಡುಕೋಣ | ಅಂತರ್ಜಾಲದಲ್ಲಿನ ಸಾಹಿತ್ಯವನ್ನು ಓದಿ ಅರ್ಥೈಸಿಕೊಂಡು ಅದರಲ್ಲಿನ ಮಾಹಿತಿಯನ್ನು ಆಧರಿಸಿ ಬರೆವಣಿಗೆ ಮಾಡುವ ಸಾಮರ್ಥ್ಯ ಬೆಳೆಸುವುದು. | ಅಂತರ್ಜಾಲದ ಬಳಕೆಯ ಉಪಯೋಗದ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು. ನಂತರ ಪಠ್ಯ ಪುಸ್ತಕದಲ್ಲಿ ಇರುವ ಕವಿಗಳ ಮಾಹಿತಿಯನ್ನು ಓದಿ ಅರ್ಥಮಾಡಿಕೊಳ್ಳಲು ಹೇಳುವುದು. ಮುಂದುವರೆದು ಸದರಿ ಕವಿಗಳ ಬಗ್ಗೆ ಅಂತರ್ಜಾಲದಲ್ಲಿ ಹೆಚ್ಚಿನ ಮಾಹಿತಿಯನ್ನು ಹುಡುಕಿ, ಓದಿ, ಅರ್ಥ ಮಾಡಿಕೊಂಡು ಸದರಿ ಕವಿಯ ಬಗ್ಗೆ ಬರೆಯಲು ಸೂಚಿಸುವುದು. ಉದಾ: ರಾಘವಾಂಕ ಕವಿಯ ಬಗ್ಗೆ ಅಂತರ್ಜಾಲದಲ್ಲಿ ಮಾಹಿತಿ ಹುಡುಕಿ ಬರೆಯುವುದರ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಮಾಡಿ ತೋರಿಸುವುದು. | ಅಭ್ಯಾಸ 4.1 | ಅವಲೋಕನ | |
| | **ಚಟುವಟಿಕೆ: 5** ಪದ್ಯದಲ್ಲಿನ ಪದಪುಂಜ, ಪ್ರಾಸಪದ ಆಸ್ವಾದಿಸೋಣ | ವಿದ್ಯಾರ್ಥಿಗಳು ಪದ್ಯದಲ್ಲಿನ ಪದಪುಂಜ, ಪ್ರಾಸಪದಗಳನ್ನು ಗುರುತಿಸುವ ಮತ್ತು ಅವುಗಳನ್ನು ಪ್ರಶಂಸಿಸುವ ಗುಣ ಬೆಳೆಸುವುದು. | ಈ ಚಟುವಟಿಕೆಗೆ 'ಚೆನ್ನವೀರ ಕಣವಿ' ಅವರ 'ಒಂದು ಮುಂಜಾವು' ಕವನವನ್ನು ಬಳಸುವುದು. ಕವನವನ್ನು ಓದುವ ಸ್ಪರ್ಧೆಯನ್ನು ಏರ್ಪಡಿಸುವುದು. ಕವನದ ಧ್ವನಿ ಸುರುಳಿಯನ್ನು ಆಲಿಸಲು ಅವಕಾಶ ಮಾಡಿಕೊಡುವುದು. ಕವನದ ಕುರಿತು ಚರ್ಚಿಸುವುದು. ಕವನದಲ್ಲಿನ ಪದಪುಂಜ, ಪ್ರಾಸಪದ ಗುರುತಿಸಿ. ವಿದ್ಯಾರ್ಥಿಗಳಿಗೆ ಕವನದಲ್ಲಿನ ಪ್ರಾಸಪದ ಮತ್ತು ವಿಶೇಷ ಪದಗಳನ್ನು ಪಟ್ಟಿ ಮಾಡಲು ತಿಳಿಸುವುದು. ಹಾಗೂ ಆ ಪದಗಳ ವಿಶೇಷತೆಯನ್ನು ಹಂಚಿಕೊಳ್ಳಲು ತಿಳಿಸುವುದು. ಸ್ವತಃ ವಿದ್ಯಾರ್ಥಿಗಳೇ ಕವನ ರಚಿಸಲು ಪ್ರೇರೇಪಿಸುವುದು. | ಕಲಿಕಾ ಹಾಳೆಯ ಅಭ್ಯಾಸ – 5.1 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾಹಾಳೆಯ ಅಭ್ಯಾಸ–6 ಕೆಳಗಿನ ವಚನದಲ್ಲಿ ಅಡಿಗೆರೆ ಎಳೆದ ಪದಗಳಿಗೆ ಅರ್ಥವನ್ನು ಬರೆದು, ವಚನದ ಸ್ವಾರಸ್ಯವನ್ನು ಕನಿಷ್ಠ ಏಳರಿಂದ ಎಂಟು ವಾಕ್ಯಗಳಲ್ಲಿ ಬರೆಯಿರಿ.

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ,
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ.
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ,
ತನುವಿನೊಳಗೆ ಹುಸಿ ತುಂಬಿ,
ಮನದೊಳಗೆ ವಿಷಯ ತುಂಬಿ.
ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವ

**ನಿಯೋಜಿತ ಕಾರ್ಯಗಳು :** ವಿದ್ಯಾರ್ಥಿಗಳು ಪಠ್ಯಪುಸ್ತಕ ಅಥವಾ ದಿನಪತ್ರಿಕೆಗಳಲ್ಲಿರುವ ಹೊಸಪದಗಳನ್ನು ಬಳಸಿ, ಒಂದು ನೋಟ್ ಬುಕ್‌ನಲ್ಲಿ ಸ್ವತಃ ಶಬ್ದಕೋಶವನ್ನು ರಚಿಸುವುದು.

ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಅಗತ್ಯವಿರುವ ಕಡೆಗೆ "ಶಬ್ದಕೋಶ, ವಾಚನಾಲಯ, ಅಂತರ್ಜಾಲ" ಮೊದಲಾದವುಗಳನ್ನು ಬಳಸಿಕೊಳ್ಳಲು ಪ್ರೇರೇಪಿಸುವುದು.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–4

**ಒಂದು ವಿಷಯವನ್ನು ಓದಿ ಅದರಲ್ಲಿರುವ ಸಾಮಾಜಿಕ ಮೌಲ್ಯಗಳ ಬಗೆಗೆ ಚರ್ಚಿಸುತ್ತಾರೆ. ಅವುಗಳ ಕಾರಣವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ. ಉದಾಹರಣೆಗೆ : ತಮ್ಮ ನೆರೆಹೊರೆಯಲ್ಲಿ ವಾಸವಿರುವ ಕುಟುಂಬಗಳ ಬಗೆಗೆ ಅವರ ವೇಷಭೂಷಣದ ಬಗೆಗೆ ಯೋಚಿಸುತ್ತ ಪ್ರಶ್ನೆಗಳನ್ನು ಕೇಳುತ್ತಾರೆ. ('ರಾಮು ಚಿಕ್ಕಪ್ಪನ ಮಗಳು ಯಾಕೆ ಶಾಲೆಗೆ ಹೋಗುವುದಿಲ್ಲ?') ಎಂದು ಪ್ರಶ್ನಿಸುತ್ತಾರೆ.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | ಭಾರತವು ಬಹುತ್ವ ದೇಶ. ವಿವಿಧ ಜಾತಿ, ಧರ್ಮ, ಭಾಷೆ, ಸಂಸ್ಕೃತಿಯಿಂದ ಕೂಡಿದೆ. ಇದು ಭಾರತದ ಸೌಂದರ್ಯ ಮತ್ತು ಶಕ್ತಿಯೂ ಕೂಡ ಆಗಿದೆ. ಈ ನೆಲೆಯಲ್ಲಿ ವಿದ್ಯಾರ್ಥಿಗಳು ಬಹುತ್ವವನ್ನು ಅರ್ಥಮಾಡಿಕೊಳ್ಳುವ ಹಾಗೆ, ಅದನ್ನು ಗೌರವಿಸಿ, ರೂಢಿಸಿಕೊಳ್ಳುವುದು. ಸಮಾಜದಲ್ಲಿನ ಸಾಮಾಜಿಕ ಮೌಲ್ಯಗಳ ಬಗ್ಗೆ ಚರ್ಚೆಮಾಡುವುದು ಓದಿ ಅರ್ಥಮಾಡಿಕೊಳ್ಳುವುದು, ಚರ್ಚೆಮಾಡುವುದು, ಕಾರಣ ತಿಳಿಯುವುದು ಮತ್ತು ಪ್ರಶ್ನಿಸುವ ಕೌಶಲವನ್ನು ಬೆಳೆಸುವುದು | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಜನಪದ ಕಲೆಗಳ ಚಿತ್ರ, ವಿಡಿಯೋಗಳು, ಪ್ರಶ್ನೆಗಳ ಚಾರ್ಟ್, 9ನೇ ತರಗತಿ ಪಠ್ಯಪುಸ್ತಕ | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | **ಚಟುವಟಿಕೆ: 1** ನಮ್ಮ ಚಿತ್ರಕ್ಕೆ ನಿಮ್ಮ ಅಭಿಪ್ರಾಯ | ಚಿತ್ರವನ್ನು ಗ್ರಹಿಸಿ, ಅನ್ವಯಿಸಿಕೊಂಡು ಮಾತನಾಡುವುದು. | ಕೆಳಗಿನ ಚಿತ್ರವನ್ನು ವಿದ್ಯಾರ್ಥಿಗಳಿಗೆ ತೋರಿಸಿ, ನೀಡಲಾದ ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆಗೆ ಅನುವು ಮಾಡಿಕೊಡುವುದು.<br>ಉದಾಹರಣೆ ಪ್ರಶ್ನೆಗಳು 1. ಚಿತ್ರದಲ್ಲಿ ಏನು ನಡೆಯುತ್ತಿದೆ? 2. ಅವರು ಏಕೆ ಮುಷ್ಕರ ಮಾಡುತ್ತಿರಬಹುದು? 3. 'ಮನೆಗೆಲಸ ಮಾಡುವುದು ಗುಲಾಮಗಿರಿಯಲ್ಲ' ಎಂಬ ನಾಮ ಫಲಕವನ್ನು ಏಕೆ ಪ್ರದರ್ಶಿಸುತ್ತಿದ್ದಾರೆ? 4. ಮನೆಯಲ್ಲಿ ಕೆಲಸ ಮಾಡುವುದಕ್ಕಿಂತ ಆಫೀಸ್‌ಗಳಲ್ಲಿ ಕೆಲಸ ಮಾಡುವುದು ಶ್ರೇಷ್ಠವೇ? ನಿಮ್ಮ ಅಭಿಪ್ರಾಯವೇನು?<br> | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ –1.1, 1.2 | ಅವಲೋಕನ | |
| | **ಚಟುವಟಿಕೆ: 2** ಸನ್ನಿವೇಶದ ಸುತ್ತ | ಸನ್ನಿವೇಶವನ್ನು ಗ್ರಹಿಸಿ, ಅದರಲ್ಲಿರುವ ಸಾಮಾಜಿಕ ಅಂಶಗಳನ್ನು ಕುರಿತು ಮಾತನಾಡುವುದು. | ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಿ, ಎರಡು ವಿಭಿನ್ನ ಸನ್ನಿವೇಶಗಳ ಪಠ್ಯ ಕೊಟ್ಟು ಓದಿ, ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ತಯಾರು ಮಾಡಲು ಸೂಚಿಸುವುದು. ನಂತರ ಪಠ್ಯಗಳನ್ನು ಅದಲು ಬದಲು ಮಾಡಿಕೊಂಡು ಓದಿ ಅರ್ಥಮಾಡಿಕೊಳ್ಳಲು ಸೂಚಿಸುವುದು. ನಂತರ ತಾವು ಸಿದ್ದಪಡಿಸಿದ ಪ್ರಶ್ನೆಗಳನ್ನು ಎದುರಿನ ತಂಡಕ್ಕೆ ಕೇಳಿ ಉತ್ತರ ಪಡೆಯುತ್ತಾ ಚರ್ಚೆಗೆ ಅನುವು ಮಾಡಿಕೊಡುವುದು. | ಅಭ್ಯಾಸ 2.1, 2.2 ಹಾಗೂ 2.3 | ಅವಲೋಕನ | |
| | **ಚಟುವಟಿಕೆ: 3** ಪದ್ಯ ಓದಿ ಚರ್ಚಿಸೋಣ | ಪದ್ಯವನ್ನು ಓದಿ ಗ್ರಹಿಸಿ ಅನ್ವಯಿಸಿಕೊಂಡು ಮಾತನಾಡುವ ಸಾಮರ್ಥ್ಯ ಬೆಳೆಸುವುದು. | ಹಂತ – 1: **ಪದ್ಯ ಅರ್ಥಮಾಡಿಕೊಳ್ಳೋಣ**:<br>**'ಬಾಳಸಂಜೆ'** ಪದ್ಯವನ್ನು ವಿದ್ಯಾರ್ಥಿಗಳಿಗೆ ಗುಂಪಿನಲ್ಲಿ ಓದುವುದಕ್ಕೆ ಅವಕಾಶವನ್ನು ಮಾಡಿಕೊಡುವುದು. ನಂತರ ಹಾವಭಾವದೊಂದಿಗೆ, ಧ್ವನಿ ಏರಿಳಿತದೊಂದಿಗೆ ಓದುವುದು. ನಂತರ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ರಚಿಸಿದ ಗುಂಪುಗಳಿಗೆ ಪ್ರಶ್ನೆಗಳನ್ನು ನೀಡಿ, ವಿದ್ಯಾರ್ಥಿಗಳಿಗೆ ಈ ಕೆಳಗಿನ ಸೂಚನೆಯನ್ನು ನೀಡುವುದು • ವಿದ್ಯಾರ್ಥಿಗಳೇ, ಈ ಪ್ರಶ್ನೆಗಳನ್ನು | ಕಲಿಕಾ ಹಾಳೆಯ ಅಭ್ಯಾಸ – 3.1 | ಅವಲೋಕನ | |

| | | | | | | |
|---|---|---|---|---|---|---|
| | | | ಓದಿ ಮತ್ತೊಮ್ಮೆ ಪದ್ಯವನ್ನು ಅರ್ಥ ಮಾಡಿಕೊಳ್ಳುತ್ತಾ ಉತ್ತರವನ್ನು ನಿಮ್ಮ ಗುಂಪಿನಲ್ಲಿ ಚರ್ಚಿಸಿ.<br>• ಹೊಸಪದಗಳ ಅರ್ಥವನ್ನು ತಿಳಿಯಲು ಶಬ್ದಕೋಶವನ್ನು ಬಳಸಿ.<br>ಹಂತ–2: **ಪದ್ಯ ಕುರಿತು ಚರ್ಚಿಸೋಣ**<br>ಪದ್ಯದಲ್ಲಿನ ಸಾಮಾಜಿಕ ಅಂಶಗಳನ್ನು ಈ ಕೆಳಗಿನ ಉದಾಹರಣೆ ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆ ಮಾಡಲು ಅವಕಾಶ ನೀಡುವುದು. ಪ್ರತಿ ವಿದ್ಯಾರ್ಥಿಗಳಿಗೂ ತಮ್ಮ ಅಭಿಪ್ರಾಯ ಹೇಳಲು ಅವಕಾಶ ನೀಡುತ್ತಾ ಪ್ರೇರಣೆ ನೀಡುವುದು.<br>1. ತಂದೆ ತಾಯಿ ಮಕ್ಕಳನ್ನು ಬೆಳಸಲು ಮತ್ತು ಓದಿಸಲು ಏನೆಲ್ಲಾ ಮಾಡಿರಬಹುದು? 2. ತಂದೆ ತಾಯಿ ತಮ್ಮ ಕೊನೆಯ ಜೀವನದ ದಿನಗಳಲ್ಲಿ ಮಕ್ಕಳ ಕಡೆಯಿಂದ ಏನನ್ನು ನೀರೀಕ್ಷಿಸಿರಬಹುದು? 3. ತಿಂಗಳಿಗೆ ಒಮ್ಮೆ ಕಾಗದ ಮತ್ತು ಮನಿಯಾರ್ಡರ್ ಮಾಡುವ ಮಗನ ವರ್ತನೆಯನ್ನು ನೀವು ಒಪ್ಪುತೀರಾ ಮತ್ತು ಏಕೆ? 4. ಈ ಪದ್ಯಕ್ಕೆ "ಬಾಳಸಂಜೆ" ಶೀರ್ಷಿಕೆ ಒಪ್ಪುತ್ತದೆಯೇ? ಕಾರಣವೇನು? ಹಾಗೆ ಬೇರೆ ಶೀರ್ಷಿಕೆ ಕೊಡುವುದಾದರೆ ಏನೆಂದು ಕೊಡಲು ಬಯಸುತ್ತೀರಾ? 5. ನಿಮ್ಮನ್ನು ಬೆಳೆಸಲು ಮತ್ತು ಓದಿಸಲು ನಿಮ್ಮ ತಂದೆ ತಾಯಿ ಕಷ್ಟಪಟ್ಟಿರಬಹುದೇ? 6. ನೀವು ಕಂಡ ಹಾಗೆ, ಹೆತ್ತವರನ್ನು ಕಡೆಗಣಿಸಿದ ಉದಾಹರಣೆಗಳು ಇವೆಯಾ? ಹಂಚಿಕೊಳ್ಳಿ, ಇತ್ಯಾದಿ | | | |
| | **ಚಟುವಟಿಕೆ: 4**<br>ಪಾಠ ಓದಿ, ಕಲೆಗಳನ್ನು ತಿಳಿಯೋಣ | ಕಲೆಗಳ ವೈವಿಧ್ಯತೆಯನ್ನು ಅರ್ಥಮಾಡಿಕೊಂಡು ಚರ್ಚೆಮಾಡುವ ಕೌಶಲವನ್ನು ಬೆಳೆಸುವುದು. | 9ನೇ ತರಗತಿಯ **'ಜನಪದ ಕಲೆಗಳ ವೈಭವ'** ಎಂಬ ಪಠ್ಯವನ್ನು ಬಳಸುವುದು. ವಿದ್ಯಾರ್ಥಿಗಳನ್ನು 4 ಗುಂಪುಗಳನ್ನಾಗಿ ಮಾಡಿ, ಪೂರ್ಣ ಗದ್ಯಭಾಗವನ್ನು ಓದಿ, ಚರ್ಚಿಸಲು ಅವಕಾಶ ಮಾಡಿಕೊಡುವುದು. ನಂತರ ಪ್ರತಿ ಗುಂಪಿಗೆ ಒಂದೊಂದು ಕಲೆಯನ್ನು(ವೀರಗಾಸೆ, ಕಂಸಾಳೆ, ಡೊಳ್ಳುಕುಣಿತ, ಯಕ್ಷಗಾನ) ನೀಡಿ, ಮಾಹಿತಿಯನ್ನು ಗುಂಪಿನಲ್ಲಿ ಚರ್ಚಿಸಿ ಬರೆಯುವಂತೆ ನೀಡುವುದು. ನಂತರ ಗುಂಪಿನಿಂದ ಒಬ್ಬರು ಎಲ್ಲಾ ತಂಡದ ಮುಂದೆ ಮಂಡಿಸಲು ಅವಕಾಶವನ್ನು ನೀಡುವುದು. ಸೂಕ್ತವಾದ ಹಿಮ್ಮಾಹಿತಿಯನ್ನು ನೀಡುವರು.<br>ಹಂತ–2: ಶಿಕ್ಷಕರು ಈ ಕೆಳಗಿನ ಪ್ರಶ್ನೆಗಳನ್ನು ನಿಯೋಜಿತಕಾರ್ಯವಾಗಿ ನೀಡುವರು. ನಂತರ ವಿದ್ಯಾರ್ಥಿಗಳು ಬರೆದು ತಂದಿದ್ದನ್ನು ಮಂಡಿಸಲು ಅವಕಾಶವನ್ನು ಮಾಡಿಕೊಡುವರು. ಹಾಗೂ ವಿದ್ಯಾರ್ಥಿಗಳು ತಮ್ಮ ಬರೆವಣಿಗೆಯನ್ನು ಉತ್ತಮಪಡಿಸಿಕೊಳ್ಳಲು ಪ್ರೇರಣೆಯನ್ನು ನೀಡುವುದು. | ಕಲಿಕಾ ಹಾಳೆಯ ಅಭ್ಯಾಸ–4.1 ಕಲೆಗಳ ವಿಡಿಯೋಗಳು | ಅವಲೋಕನ | |

50

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ ಅಭ್ಯಾಸ–5.(ಗದ್ಯಭಾಗ ಬಳಸುವುದು)

**ನಿಯೋಜಿತ ಕಾರ್ಯಗಳು :** ನಿಮ್ಮ ಊರಿನ ಕಲಾವಿದರನ್ನು ಸಂದರ್ಶನ ಮಾಡಿ, ಕಲೆಯ ವೈಶಿಷ್ಟ್ಯವನ್ನು ಬರೆದು ತನ್ನಿ.

ನಿಮ್ಮ ಊರಿನಲ್ಲಿ ವಿವಿಧ ಹಬ್ಬ, ಜಾತ್ರೆ ಮತ್ತಿತ್ತರ ಸನ್ನಿವೇಶದಲ್ಲಿ ತೊಡುವ ಸಾಂಪ್ರದಾಯಿಕ ವೇಷಭೂಷಣದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಕೊಂಡು ಬರೆಯಿರಿ.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–5

**ಗಾದೆ, ಕವಿತೆ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಸ್ವತ: ಓದಿ ಅರ್ಥಮಾಡಿಕೊಂಡು ಅವುಗಳ ವಿವಿಧ ಶೈಲಿ ಪ್ರಕಾರಗಳ ಬಗೆಗೆ ತಿಳಿಯುತ್ತಾರೆ. ಓದಿದ ಅಪರಿಚಿತ ಪರಿಸ್ಥಿತಿ ಮತ್ತು ಘಟನೆಗಳ ಬಗೆಗೆ ಕಲ್ಪನೆ ಮಾಡಿಕೊಳ್ಳುತ್ತಾರೆ ಮತ್ತು ಅವುಗಳ ಬಗೆಗೆ ತಮ್ಮ ಮನಸ್ಸಿನಲ್ಲಿ ಮೂಡಿದ ಭಾವನೆ ಮತ್ತು ಅನುಭವಗಳನ್ನು ಬರವಣಿಗೆಯಲ್ಲಿ ಇಲ್ಲವೆ ಬ್ರೈಲ್ ಭಾಷೆಯಲ್ಲಿ ಅಭಿವ್ಯಕ್ತ ಪಡಿಸುತ್ತಾರೆ.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥಮಾಡಿಕೊಂಡು ಅವುಗಳ ವ್ಯತ್ಯಾಸಗಳನ್ನು ಗುರುತಿಸುವ ಹಾಗೂ ಅಪರಿಚಿತ ಸನ್ನಿವೇಶಗಳನ್ನು ಕಲ್ಪಿಸಿಕೊಂಡು ತಮ್ಮದೇ ಮಾತುಗಳಲ್ಲಿ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಬೆಳೆಸುವುದು. | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಗಾದೆಗಳ ಪಟ್ಟಿ | | | | | |

| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
|---|---|---|---|---|---|---|
| | | | | **ಸಾಧನಗಳು** | **ತಂತ್ರಗಳು** | |
| | **ಚಟುವಟಿಕೆ: 1** ಬರೆವಣಿಗೆ ನೋಡಿ, ಸಾಹಿತ್ಯ ಪ್ರಕಾರ ತಿಳಿಯೋಣ. | ವಿವಿಧ ಸಾಹಿತ್ಯ ಪ್ರಕಾರಗಳ ಬರೆವಣಿಗೆಯ ಸ್ವರೂಪಗಳನ್ನು ಅರ್ಥೈಸುವುದು. | ಸಾಹಿತ್ಯ ಪ್ರಕಾರಗಳಲ್ಲಿನ ಬರೆವಣಿಗೆಯ ಸ್ವರೂಪ ಕುರಿತಂತೆ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾ ಚರ್ಚಿಸುವುದು • ನಿಮ್ಮ ಪಠ್ಯ ಪುಸ್ತಕದಲ್ಲಿ ನಿಮಗೆ ಪದ್ಯಭಾಗ ಇಷ್ಟವಾಗುತ್ತೋ? ಗದ್ಯಭಾಗ ಇಷ್ಟವಾಗುತ್ತೋ? • ಅವುಗಳು ನಿಮಗೆ ಏಕೆ ಇಷ್ಟವಾಗುತ್ತವೆ? • ಕಥೆ, ಪದ್ಯ, ನಾಟಕ, ಗಾದೆ, ಒಗಟು ಇವುಗಳಲ್ಲಿರುವ ವ್ಯತ್ಯಾಸಗಳನ್ನು ಗಮನಿಸಿದ್ದೀರಾ? ಹೀಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ, ವಿದ್ಯಾರ್ಥಿಗಳನ್ನು ಮೂರು ಗುಂಪುಗಳನ್ನಾಗಿ ಮಾಡಿ, ಮೂರು ಗುಂಪಿಗೂ ಒಂದೇ ರೀತಿಯ ಕಥೆ ಮತ್ತು ಕವಿತೆಯನ್ನು ನೀಡಿ, ಇವುಗಳ ಬರೆವಣಿಗೆ ಶೈಲಿಯ ವ್ಯತ್ಯಾಸಗಳನ್ನು ಗುರುತಿಸಿ ಪಟ್ಟಿ ಮಾಡಿಕೊಂಡು, ಗುಂಪಿನಿಂದ ಒಬ್ಬರು ಮಂಡಿಸುವಂತೆ ಸೂಚಿಸುವುದು. ವಿದ್ಯಾರ್ಥಿಗಳ ಮಂಡನೆ ಮುಗಿದ ಬಳಿಕ ಈ ಎರಡು ಪ್ರಕಾರಗಳ ಬರೆವಣಿಗೆ ಶೈಲಿಯ ವ್ಯತ್ಯಾಸವನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆವಣಿಗೆ ಶೈಲಿ ಹೇಗೆ ನಿರೂಪಣೆಯಾಗಿದೆ ಎಂಬುದನ್ನು ತಿಳಿಸುವುದು. | 9ನೇ ತರಗತಿ ಪಠ್ಯ ಪುಸ್ತಕದ ಪದ್ಯ 'ಪಾರಿವಾಳ' ಹಾಗೂ ಕಲಿಕಾ ಹಾಳೆಯಲ್ಲಿನ ಅಭ್ಯಾಸ–1.1 | ಅವಲೋಕನ | |
| | **ಚಟುವಟಿಕೆ: 2** ಗಾದೆಗಳನ್ನು ವಿಸ್ತರಿಸೋಣ | ಗಾದೆಗಳನ್ನು ಓದಿ ಅವುಗಳ ವಿಸ್ತೃತ ರೂಪಗಳನ್ನು ತಿಳಿದು ತಮ್ಮದೇ ಮಾತುಗಳಲ್ಲಿ ವಿವರಿಸುವ ಸಾಮರ್ಥ್ಯ ಬೆಳೆಸುವುದು. | ಗಾದೆಗಳು ಎಂದರೆ ಏನು? • ನಿಮಗೆ ಗೊತ್ತಿರುವ ಗಾದೆಗಳನ್ನು ತಿಳಿಸಿ? • ನೀವು ನಿಮ್ಮ ಮಾತುಗಳ ನಡುವೆ ಗಾದೆಗಳನ್ನು ಬಳಸಿದ್ದೀರಾ? • ಏಕೆ ಇವುಗಳನ್ನು ಮಾತಿನ ನಡುವೆ ಬಳಸುತ್ತಾರೆ? ಹೀಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ, ವಿದ್ಯಾರ್ಥಿಗಳನ್ನು 4 ಗುಂಪುಗಳಾಗಿ ವಿಂಗಡಿಸಿ, 4 ಗುಂಪಿಗೂ ಒಂದೊಂದು ಗಾದೆಯನ್ನು ಕೊಟ್ಟು ಅದರ ವಿಸ್ತೃತ ಅರ್ಥವನ್ನು ಗುಂಪಿನಲ್ಲಿ ಚರ್ಚಿಸಿ, ಮಂಡಿಸುವಂತೆ ಸೂಚಿಸುವುದು.<br>ವಿದ್ಯಾರ್ಥಿಗಳು ತಮ್ಮ ಗುಂಪುಗಳಲ್ಲಿ ಚರ್ಚಿಸಿ ತಮ್ಮ ಆಲೋಚನೆಗಳನ್ನು ತಿಳಿಸಿದ ನಂತರ ಗಾದೆಗಳ ಬಳಕೆಯ ಮಹತ್ತ್ವ ಶೈಲಿ ಮತ್ತು ಅವುಗಳ ವಿಸ್ತೃತ ರೂಪಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ ತಿಳಿಸುವುದು. ನಂತರ ವಿದ್ಯಾರ್ಥಿಗಳಿಗೆ 3 ಗಾದೆಗಳನ್ನು ಕೊಟ್ಟು ತಮಗೆ ಇಷ್ಟವೆನಿಸುವ ಒಂದು ಗಾದೆಯನ್ನು ಆಯ್ದುಕೊಂಡು ಗಾದೆಯನ್ನು ವಿಸ್ತರಿಸಿ ತಮ್ಮದೇ ಮಾತುಗಳಲ್ಲಿ ಬರೆಯುವಂತೆ ತಿಳಿಸುವುದು. ವಿದ್ಯಾರ್ಥಿಗಳು ಬರೆದಿರುವ ಗಾದೆಮಾತಿನ ವಿವರಣೆಗಳನ್ನು, ಪ್ರತಿಯೊಬ್ಬರೂ ತಮ್ಮ ತಮ್ಮ ಬರವಣಿಗೆಗಳನ್ನು ಸ್ನೇಹಿತರೊಂದಿಗೆ | ಅಭ್ಯಾಸ–2.1 ಮತ್ತು 2.2 | ಅವಲೋಕನ | |

| | | | | | | |
|---|---|---|---|---|---|---|
| | | | ಬದಲಿಸಿಕೊಂಡು ಓದಿ, ಗಾದೆಯ ವಿಶ್ಲೇಷಣೆಯು ಗಾದೆಗೆ ಹೊಂದಾಣಿಕೆ ಆಗುತ್ತದೆಯೇ ಇಲ್ಲವೆ ಎಂಬುದಕ್ಕೆ ಕಾರಣಗಳನ್ನು ಬರೆದು ಹಿಮ್ಮಾಹಿತಿಯನ್ನು ನೀಡುವಂತೆ ಸೂಚಿಸುವುದು. ನಂತರ ವಿದ್ಯಾರ್ಥಿಗಳು ಬರೆದ ವಿಶ್ಲೇಷಣೆ ಮತ್ತು ಹಿಮ್ಮಾಹಿತಿಗಳನ್ನು ಗಮನಿಸಿ, 3 ಗಾದೆಗಳ ವಿಶ್ಲೇಷಣೆಯ ಸ್ವರೂಪವನ್ನು ಕುರಿತು ಮಾತನಾಡುವರು. | | | |
| | **ಚಟುವಟಿಕೆ: 3**<br>ನಾನೂ ಬರೆಯುವೆ ನಾಟಕ | ತಾವು ಓದಿದ ಕೇಳಿದ ಕಥೆ ಮತ್ತು ಸನ್ನಿವೇಶಗಳಗಳನ್ನು ಸಂಭಾಷಣೆ (ನಾಟಕ) ರೂಪದಲ್ಲಿ ಬರೆಯುವ ಸಾಮರ್ಥ್ಯವನ್ನು ಬೆಳೆಸುವುದು | ನಾಟಕದ ಸ್ವರೂಪ ಮತ್ತು ಬರೆವಣಿಗೆ ಶೈಲಿಗೆ ಸಂಬಂಧಿಸಿದಂತೆ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು. ಚರ್ಚಿಸಿದ ಬಳಿಕ, ತರಗತಿ ವಿದ್ಯಾರ್ಥಿಗಳನ್ನು ಆಯ್ದುಕೊಂಡು 9ನೇ ತರಗತಿಯ 'ಚೆನ್ನಬೈರಾದೇವಿ' ನಾಟಕದ ಪಾತ್ರಗಳನ್ನು ಹಂಚಿಕೆ ಮಾಡಿ, ಪಾತ್ರಕ್ಕನುಸಾರವಾಗಿ ಓದಲು ಹೇಳುವುದು. ವಿದ್ಯಾರ್ಥಿಗಳ ಓದು ಮುಗಿದ ನಂತರ ವಿದ್ಯಾರ್ಥಿಗಳನ್ನು 4 ಗುಂಪುಗಳನ್ನಾಗಿ ಮಾಡಿ, ನಾಟಕವನ್ನು ಗುಂಪಿನಲ್ಲಿ ಓದಿ, ಚರ್ಚಿಸಿ ಪಾತ್ರಗಳನ್ನು ತಮ್ಮದೇ ಮಾತುಗಳಲ್ಲಿ ಬರೆಯುವಂತೆ ತಿಳಿಸುವುದು. ಗುಂಪುಗಳಲ್ಲಿ ಸಿದ್ಧಗೊಂಡ ಪಾತ್ರ ಚಿತ್ರಣವನ್ನು ಒಂದೊಂದು ಗುಂಪಿನಿಂದ ಒಂದೊಂದು ಪಾತ್ರ ಚಿತ್ರಣವನ್ನು ಓದುವಂತೆ ತಿಳಿಸಿ, ಒಂದು ಗುಂಪಿನವರು ಓದುವಾಗ ಇನ್ನೊಂದು ಗುಂಪು, ಆ ಪಾತ್ರಕ್ಕೆ ಇನ್ನು ಯಾವೆಲ್ಲ ವಿಷಯಗಳನ್ನು ಸೇರಿಸಬಹುದು ಎಂಬುದನ್ನು ತಿಳಿಸುವಂತೆ ಸೂಚಿಸುವುದು. ಹೀಗೆ ನಾಲ್ಕು ಗುಂಪಿನಿಂದ ಮಂಡನೆ ಮತ್ತು ಚರ್ಚೆ ಮುಗಿದ ನಂತರ ನಾಟಕದ ಹಿನ್ನಲೆಯನ್ನು ಹೇಳುತ್ತಾ, ನಾಟಕದ ಪೂರ್ಣ ಸಾರಾಂಶವನ್ನು ವಿವರಿಸುವರು.<br>ವಿದ್ಯಾರ್ಥಿಗಳ ನಾಲ್ಕು ಗುಂಪಿಗೆ, ಸಂಪೂರ್ಣ ನಾಟಕವನ್ನು 4 ಭಾಗಗಳನ್ನಾಗಿ ಮಾಡಿ, ಒಂದೊಂದು ಗುಂಪಿಗೆ ಒಂದೊಂದು ಭಾಗವನ್ನು ಕೊಟ್ಟು, ನಾಟಕವನ್ನು ಅಭಿನಯಿಸಲು ಸೂಚಿಸುವುದು. ವಿದ್ಯಾರ್ಥಿಗಳು ಅಭಿನಯಿಸಿದ ನಂತರ ತಾವು ಅಭಿನಯಿಸಿದ ಭಾಗವನ್ನು ತಮ್ಮದೇ ಆಡು ಭಾಷೆಯಲ್ಲಿ ಸಂಭಾಷಣೆಯನ್ನು ಸಿದ್ಧಪಡಿಸುವಂತೆ ಸೂಚಿಸುವುದು. | ಅಭ್ಯಾಸ–3.1, 3.2 ಮತ್ತು 3.3 ಪಠ್ಯಪುಸ್ತಕ | ಅವಲೋಕನ | |
| | **ಚಟುವಟಿಕೆ: 4**<br>ಆಲೋಚಿಸಿ ಬರೆಯೋಣ | ಅಪರಿಚಿತ ಸನ್ನಿವೇಶಗಳನ್ನು ಗ್ರಹಿಸಿಕೊಂಡು ಲಿಖಿತ ರೂಪದಲ್ಲಿ ವ್ಯಕ್ತಪಡಿಸುವುದು. | ವಿದ್ಯಾರ್ಥಿಗಳಿಗೆ ಪರಿಚಯವಿಲ್ಲದ ಯಾವುದಾದರೂ ಸಾಹಿತ್ಯದ ಭಾಗವನ್ನು ಓದಲು ನೀಡಿ, ಆ ವಿಷಯದ ಬಗ್ಗೆ ವಿದ್ಯಾರ್ಥಿಗಳಲ್ಲಿ ಮೂಡಿದ ಭಾವನೆ, ಕಲ್ಪನೆಯ ಬಗ್ಗೆ ಲಿಖಿತವಾಗಿ ತನ್ನದೇ ಮಾತುಗಳಲ್ಲಿ ಅಭಿವ್ಯಕ್ತಿಸಲು ಅವಕಾಶ ನೀಡುವುದು<br>ವಿದ್ಯಾರ್ಥಿಗಳನ್ನು 4 ಗುಂಪುಗಳನ್ನಾಗಿ ಮಾಡಿ ಪ್ರತೀ ಗುಂಪಿಗೂ ಅಪರಿಚಿತ ಸನ್ನಿವೇಶವನ್ನು ನೀಡಿ, ಗುಂಪಿನಲ್ಲಿ ಚರ್ಚಿಸಿ ತಮ್ಮ ಅನಿಸಿಕೆಗಳನ್ನು ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಗುಂಪಿನಿಂದ ಒಬ್ಬೊಬ್ಬರು ಗುಂಪಿನ ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ ತಿಳಿಸುವುದು. ವಿದ್ಯಾರ್ಥಿಗಳು ಮಂಡಿಸಿದ ಅನಿಸಿಕೆಗಳಿಗೆ ಅನುಗುಣವಾಗಿ, ನಮಗೆ ಹೊಸ ವಿಷಯವಸ್ತುವೊಂದನ್ನು ನೋಡಿದಾಗ ಏನೆಲ್ಲ ಆಲೋಚಿಸಲು ಸಾಧ್ಯವಾಗುತ್ತದೆ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು. | ಕಲಿಕೆ ಹಾಳೆಯಲ್ಲಿ ಅಭ್ಯಾಸ– 4.1,4.2, 4.3,4.4 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ ಅಭ್ಯಾಸ–5 ರಲ್ಲಿನ ಉಪ್ಪಿನ ಸತ್ಯಾಗ್ರಹ ಎಂಬ ಲೇಖನವನ್ನು ಬಳಸಿಕೊಳ್ಳುವುದು.

**ನಿಯೋಜಿತ ಕಾರ್ಯಗಳು :** ನಿಮ್ಮ ಊರಿನಲ್ಲಿ ಬಳಕೆಯಲ್ಲಿರುವ ಗಾದೆ ಮಾತುಗಳನ್ನು ಸಂಗ್ರಹಿಸಿರಿ. • ನೀವು ನೋಡಿರುವ ನಾಟಕಗಳ ಹೆಸರುಗಳನ್ನು ಪಟ್ಟಿ ಮಾಡಿ, ಯಾವುದಾರೊಂದು ನಾಟಕಕ್ಕೆ ನಿಮ್ಮದೇ ಮಾತುಗಳಲ್ಲಿ ಸಂಭಾಷಣೆಯೊಂದನ್ನು ಬರೆಯಿರಿ.

ವಿಷಯ ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–6

**ತಮ್ಮ ಅನುಭವಗಳನ್ನು ತಮ್ಮದೇ ಭಾಷಾ ಶೈಲಿಯಲ್ಲಿ ಬರೆಯುತ್ತಾರೆ. ಲೇಖನದ ವಿವಿಧ ಪ್ರಕಾರಗಳ ಮತ್ತು ಶೈಲಿಗಳ ಪ್ರಯೋಗ ಮಾಡುತ್ತಾರೆ. ಉದಾ: ಕಥೆ, ಕವಿತೆ, ಪ್ರಬಂಧ, ಇತ್ಯಾದಿ.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಕಥೆ, ಕವಿತೆ, ಪ್ರಬಂಧ, ನಾಟಕ, ದಿನಚರಿ ಇತ್ಯಾದಿ ಸಾಹಿತ್ಯಗಳ ಪ್ರಕಾರದ ಮೂಲಕ ವಿವಿಧ ಶೈಲಿಯ ಭಾಷಾ ಪ್ರಯೋಗ ಮಾಡಿ ಬರೆಯುವಂತೆ ಮಾಡುವ ಉದ್ದೇಶ ಹೊಂದಿದೆ. ಪಠ್ಯಪುಸ್ತಕದಾಚೆಯ, ತರಗತಿ ಕೋಣೆಯ ಆಚೆಯ ವಿದ್ಯಾರ್ಥಿಗಳ ಅನುಭವಗಳಿಗೆ ಮೂರ್ತರೂಪ ಕೊಡುವುದು. | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಪಠ್ಯಪುಸ್ತಕ, ಜನಪದ ಕಲೆಗಲ ಚಿತ್ರಗಳು, ದಿನಚರಿ ಮಾದರಿಗಳು. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | **ಚಟುವಟಿಕೆ–1** ನಮ್ಮ ಅನುಭವಗಳನ್ನು ಹೀಗೆ ಬರೆಯೋಣ | ತಮ್ಮ ಅನುಭವಗಳನ್ನು ವ್ಯಕ್ತಪಡಿಸುತ್ತಾ ಅದನ್ನು ತಮ್ಮದೇ ಶೈಲಿಯಲ್ಲಿ ಬರೆಯುವ ಸಾಮರ್ಥ್ಯ ಬೆಳೆಸುವುದು. | ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳುತ್ತಾ ಅವರ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿ ಕೊಡಬೇಕು.(ಮೌಖಿಕವಾಗಿ)<br>ಉದಾಹರಣೆಗೆ ಕೆಲವು ಪ್ರಶ್ನೆಗಳು<br>ನಿಮ್ಮ ಊರಿನಲ್ಲಿ ಯಾವ ಯಾವ ಜಾತ್ರೆಗಳು ನಡೆಯುತ್ತವೆ?<br>(ಉತ್ತರಗಳನ್ನು ಪಡೆದ ನಂತರ)<br>ಹೀಗೆ ಪ್ರಶ್ನೋತ್ತರ ಸಂಭಾಷಣೆಯನ್ನು ಮಾಡುತ್ತಾ ಗುಂಪುಗಳನ್ನಾಗಿ ಮಾಡಿ, 9ನೇ ತರಗತಿ 6ನೇ ಪಾಠ **'ಜನಪದ ಕಲೆಗಳ ವೈಭವ'** ಪಾಠವನ್ನು ಮೌನವಾಗಿ ಓದುವಂತೆ ಹೇಳಬೇಕು. ಓದಿದ ನಂತರ ಜನಪದ ಕಲೆಗಳ ವೈಶಿಷ್ಟ್ಯಗಳನ್ನು ಪಟ್ಟಿ ಮಾಡಿಸುವುದು, ಗುಂಪಿನಿಂದ ಒಬ್ಬೊಬ್ಬರು ಮಂಡಿಸುವಂತೆ ಸೂಚಿಸುವುದು. ಮಂಡಿಸಿದ ನಂತರ ಶಿಕ್ಷಕರು ಜನಪದ ಕಲೆಗಳ ವೈಭವ ಪಾಠವನ್ನು ಬಳಸಿಕೊಂಡು ಸವಿವರಣೆಗಳನ್ನು ನೀಡುವುದು. ಜನಪದ ಕಲೆಗಳ ಕುರಿತು ತಿಳಿದುಕೊಂಡ ನಂತರ ವಿದ್ಯಾರ್ಥಿಗಳಿಗೆ ತಮ್ಮ ಊರಿನಲ್ಲಿ ಆಚರಣೆಯಲ್ಲಿರುವ ಜಾನಪದ ಕಲೆಗಳು ಅಥವಾ ಜಾತ್ರಾ ಸಮಾರಂಭಗಳನ್ನು ಕುರಿತು ತಮ್ಮದೇ ವಾಕ್ಯಗಳಲ್ಲಿ ಬರೆಯುವಂತೆ ಸೂಚಿಸುವುದು. | ಕಲಿಕಾ ಹಾಳೆಗಳು ಅಭ್ಯಾಸ 1.1 ಮತ್ತು 1.2 | ಅವಲೋಕನ | |
| | **ಚಟುವಟಿಕೆ–2** ಸರಣಿ ಚಿತ್ರಕ್ಕೊಂದು ಕಥೆ ಕಟ್ಟೋಣ | ಕಥೆ ಕಟ್ಟುವ ಕೌಶಲವನ್ನು ಬೆಳೆಸುವುದು. | ವಿದ್ಯಾರ್ಥಿಗಳ ಗುಂಪುಗಳನ್ನಾಗಿ ಮಾಡಿ, ಸರಣಿ ಚಿತ್ರಗಳನ್ನು ನೀಡಿ, ಆ ಚಿತ್ರಗಳನ್ನು ನೋಡಿ ವಿದ್ಯಾರ್ಥಿಗಳೆಲ್ಲರೂ ಗುಂಪಿನಲ್ಲಿ ಚರ್ಚಿಸಿ ಚಿತ್ರಕ್ಕೆ ಹೊಂದಿಕೆಯಾಗುವ ಕಥೆಯೊಂದನ್ನು ಬರೆದು ಶೀರ್ಷಿಕೆಯೊಂದನ್ನು ನೀಡುವಂತೆ ಸೂಚಿಸುವುದು. | ಅಭ್ಯಾಸ 2.1 ಮತ್ತು 2.2, 2.3 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ–3**<br>ಈ ದಿನದ ದಿನಚರಿಯನ್ನು ಬರೆಯಿರಿ. | ದಿನನಿತ್ಯದ ಅನುಭವಗಳನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಪಡಿಸುವುದು. | ಈ ದಿನ ನಡೆದ ಪ್ರಮುಖ ವಿಷಯಗಳನ್ನಿಟ್ಟುಕೊಂಡು ದಿನಚರಿ ಬರೆಸುವುದು. ದಿನಚರಿಯ ಸ್ವರೂಪವನ್ನು ಗಮನಿಸಲು ಹೇಳುವುದು.<br>ದಿನಚರಿಯಲ್ಲಿ ಸಮಯವನ್ನು ನಿರ್ದಿಷ್ಟವಾಗಿ ಬರೆದಿದ್ದೀರಾ ?<br>ಈ ದಿನ ನಡೆದ ಪ್ರಮುಖಾಂಶಗಳನ್ನು ಒಳಗೊಂಡಿದಿಯಾ?<br>ಅನುಕ್ರಮವಾಗಿ ವಿಷಯ ನಿರೂಪಿತವಾಗಿದಿಯಾ? ಬರೆದಿದ್ದನ್ನು ಓದಲು ಹೇಳುವುದು. ಈ ಚಟುವಟಿಕೆಯಿಂದ ವಿದ್ಯಾರ್ಥಿಗಳಿಗೆ ದಿನಚರಿ ಎಂದರೇನು ? ಅದರ ಸ್ವರೂಪವೇನು ? ಇದರಿಂದ ಏನು ಉಪಯೋಗ ? ಎಂಬ ವಿಚಾರಗಳು ಗೊತ್ತುಪಡಿಸುವುದು. | ಅಭ್ಯಾಸ 3.1 ಮತ್ತು 3.2 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯ ಅಭ್ಯಾಸ –4 ಅನ್ನು ಬಳಸಿಕೊಳ್ಳುವುದು .

**ನಿಯೋಜಿತ ಕಾರ್ಯಗಳು :** **ಬೆಡಗಿನ ತಾಣ ಜಯಪುರ** ಪಾಠವನ್ನು ಓದಿ ನಿಮ್ಮದೇ ಮಾತುಗಳಲ್ಲಿ ಸಾರಾಂಶವನ್ನು ಬರೆಯಿರಿ

**ಪ್ರಜಾನಿಷ್ಠೆ** ಪಾಠವನ್ನು ಓದಿ ಸಣ್ಣ ಕಥೆಯೊಂದನ್ನು ರಚಿಸಿ.

ಪ್ರತಿದಿನ ನೋಟ್ ಬುಕ್ ನಲ್ಲಿ ದಿನಚರಿ ಬರೆಯಿರಿ.

ನಿಮ್ಮ ಊರಿನಲ್ಲಿರುವ ಜನಪದ ಕಥೆಗಳನ್ನು ಮತ್ತು ಜನಪದ ಗೀತೆಗಳನ್ನು ಸಂಗ್ರಹಿಸಿ.

ವಿಷಯ ಶಿಕ್ಷಕರ ಸಹಿ                                                    ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–7

**ಕನ್ನಡ ಭಾಷೆಯಲ್ಲಿರುವ ವಿವಿಧ ಪ್ರಕಾರದ ಸಾಹಿತ್ಯ ಸಾಮಗ್ರಿಗಳನ್ನು (ಉದಾಹರಣೆಗೆ, ಸುದ್ದಿಪತ್ರ, ಸಮಾಚಾರ ಪತ್ರಿಕೆ, ತಿಳಿವಳಿಕೆ ಪತ್ರ, ಅಂತರ್ಜಾಲಗಳಲ್ಲಿ ಲಭ್ಯವಿರುವ ಲೇಖನಗಳು ಮುಂತಾದವು) ಅರ್ಥೈಸಿಕೊಳ್ಳುತ್ತಾ ಓದುತ್ತಾರೆ ಮತ್ತು ಅವುಗಳಲ್ಲಿ ತಮಗೆ ಇಷ್ಟವಾದ ಮತ್ತು ಇಷ್ಟವಾಗದ ವಿಚಾರಗಳ ಬಗೆಗೆ ಟಿಪ್ಪಣಿ, ಅನಿಸಿಕೆ, ವಿಮರ್ಶೆ ಇತ್ಯಾದಿಗಳನ್ನು ಮೌಖಿಕವಾಗಿ ಇಲ್ಲವೇ ಬರೆವಣಿಗೆ ರೂಪದಲ್ಲಿ ವ್ಯಕ್ತಪಡಿಸುತ್ತಾರೆ ಹಾಗೂ ನಿರರ್ಗಳವಾಗಿ ಸಂವಾದ ನಡೆಸುತ್ತಾರೆ.**

| **9ನೇ ತರಗತಿ** | **ವಿಷಯ** | **ಪ್ರಥಮ ಭಾಷೆ ಕನ್ನಡ** | **ಪ್ರಾರಂಭ ದಿನಾಂಕ** | | **ಮುಕ್ತಾಯ ದಿನಾಂಕ** | |
|---|---|---|---|---|---|---|
| **ಉದ್ದೇಶಗಳು** | ಓದು ಮತ್ತು ಗ್ರಹಿಕೆಗೆ ಸಂಬಂಧಿಸಿದಂತೆ ಹಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ಟಿಪ್ಪಣಿ ಸಿದ್ಧಪಡಿಸುವ, ಸ್ವಂತ ಅಭಿಪ್ರಾಯ ವ್ಯಕ್ತಪಡಿಸುವ ಹಾಗೂ ವಿಮರ್ಶಿಸುವ ಕೌಶಲ್ಯಗಳನ್ನು ಬೆಳೆಸುವುದು. ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿತದ್ದನ್ನು ಹೊರ ಜಗತ್ತಿನೊಂದಿಗೆ ಅನ್ವಯಿಸಿಕೊಂಡು, ಸರಿ ತಪ್ಪುಗಳನ್ನು ಪರಾಮರ್ಶಿಸುವ ಕಲೆಯನ್ನು ರೂಢಿಸುವುದು. | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಕಥೆ ಪುಸ್ತಕಗಳು. | | | | | |
| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
| | | | | **ಸಾಧನಗಳು** | **ತಂತ್ರಗಳು** | |
| | **ಚಟುವಟಿಕೆ: 1** ಕಥೆಯೊಂದನ್ನು ಓದೋಣ | ಪಠ್ಯವನ್ನು ಓದಿ ಅರ್ಥಮಾಡಿಕೊಂಡು ಟಿಪ್ಪಣಿಯನ್ನು ರಚಿಸುವ ಸಾಮರ್ಥ್ಯ ಬೆಳೆಸುವುದು. | ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ವಿಂಗಡಿಸಿ, ಕಥೆಯೊಂದನ್ನು ವಿದ್ಯಾರ್ಥಿಗಳಿಗೆ ನೀಡುವುದು. ಪ್ರಶ್ನೆಗಳನ್ನು ಕೇಳುತ್ತಾ, ಈ ಕಥೆಯಲ್ಲಿ ನಮಗೆ ಇಷ್ಟವಾದ ಪಾತ್ರವನ್ನು ಕುರಿತು ಟಿಪ್ಪಣಿಯನ್ನು ಬರೆಯೋಣ ಎಂದು ಹೇಳಿ, ಟಿಪ್ಪಣಿ ರಚನೆ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿ, ಟಿಪ್ಪಣಿ ಬರೆಯುವಂತೆ ಸೂಚಿಸುವರು. ವಿದ್ಯಾರ್ಥಿಗಳು ಟಿಪ್ಪಣಿ ಬರೆದಿದ್ದನ್ನು ತರಗತಿಯಲ್ಲಿ ಮಂಡಿಸಲು ಅವಕಾಶ ನೀಡಿ, ನಂತರ ಶಿಕ್ಷಕರು ಹಿಮ್ಮಾಹಿತಿಯನ್ನು ನೀಡುವರು. | ಅಭ್ಯಾಸ 1.1, 1.2 ಮತ್ತು 1.3 | ಅವಲೋಕನ | |
| | **ಚಟುವಟಿಕೆ: 2** ಲೇಖನ ವೊಂದೆಕ್ಕೆ ಅಭಿಪ್ರಾಯ ಬರೆಯೋಣ | ತಮಗೆ ಇಷ್ಟವಾದ ಹಾಗೂ ಇಷ್ಟವಾಗದ ವಿಷಯಗಳಿಗೆ ಕಾರಣ ಕೊಟ್ಟು ಮಾತನಾಡುವುದು ಅಥವಾ ಬರೆಯುವುದು. | ಗಾಂಧೀಜಿಯವರ ಬಗ್ಗೆ ಇರುವ ಲೇಖನವನ್ನು ವಿದ್ಯಾರ್ಥಿಗಳಿಗೆ ಕೊಟ್ಟು ಗುಂಪಿನಲ್ಲಿ ಓದುವಂತೆ ತಿಳಿಸುವುದು. ವಿದ್ಯಾರ್ಥಿಗಳು ಗುಂಪಿನಲ್ಲಿ ಓದಿದ ಬಳಿಕ, ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆ ಮಾಡುವುದು. ಕಲಿಕಾ ಹಾಳೆಯಲ್ಲಿನ ಅಭ್ಯಾಸದಲ್ಲಿ ಬರೆದು ಮಂಡಿಸಲು ವಿದ್ಯಾರ್ಥಿಗಳಿಗೆ ಸೂಚಿಸುವುದು. | ಅಭ್ಯಾಸ – 2.1, 2.2 | ಅವಲೋಕನ | |
| | **ಚಟುವಟಿಕೆ: 3** ಲೇಖನಕ್ಕೊಂದು ವಿಮರ್ಶೆ ಬರೆಯೋಣ | ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಓದಿ ಅರ್ಥೈಸಿಕೊಳ್ಳುವುದು. | ತರಗತಿ ವಿದ್ಯಾರ್ಥಿಗಳನ್ನು 2 ಗುಂಪುಗಳನ್ನಾಗಿ ಮಾಡಿ, ಲೇಖನವನ್ನು ವಿದ್ಯಾರ್ಥಿಗಳಿಗೆ ಓದಲು ನೀಡಿ ಸೂಚನೆಗಳನ್ನು ನೀಡುವುದು. ಒಂದನೇ ಗುಂಪಿಗೆ ಲೇಖನದಲ್ಲಿನ ಮುಖ್ಯಾಂಶಗಳನ್ನು ಆಧರಿಸಿ ಟಿಪ್ಪಣಿ ಬರೆಯಲು ತಿಳಿಸುವರು. • ಎರಡನೇ ಗುಂಪಿಗೆ ಲೇಖನ ಒಳಗೊಂಡಿರುವ ಇಷ್ಟವಾದ ಮತ್ತು ಇಷ್ಟವಾಗದ ಅಂಶಗಳನ್ನು ವಿಮರ್ಶಿಸುವಂತೆ ತಿಳಿಸುವರು. ಎರಡು ಗುಂಪಿನವರಿಗೂ ಮಂಡನೆಗೆ ಅವಕಾಶಗಳನ್ನು ನೀಡುವುದು. | ಅಭ್ಯಾಸ: 3.1, 3.2 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ ಅಭ್ಯಾಸ–4 ರಲ್ಲಿನ **'ಕಾಗೆಯ ಸೇಡು'** ಎಂಬ ಕಥೆ ಮತ್ತು ಪ್ರಶ್ನೆಗಳನ್ನು ಬಳಸುವುದು.

**ನಿಯೋಜಿತ ಕಾರ್ಯಗಳು :** ದಿನ ಪತ್ರಿಕೆಗಳಲ್ಲಿ ನಿಮಗೆ ಇಷ್ಟವಾದ ಲೇಖನವೊಂದನ್ನು ಆಯ್ದುಕೊಂಡು ಟಿಪ್ಪಣಿಯೊಂದನ್ನು ಸಿದ್ಧಪಡಿಸಿ.

ದಿನ ಪತ್ರಿಕೆಯಲ್ಲಿನ ಯಾವುದಾದರೊಂದು ಲೇಖನವನ್ನು ಆಯ್ದುಕೊಂಡು, ಓದಿ ಅದರಲ್ಲಿ ನಿಮಗೆ ಇಷ್ಟವಾದ ವಿಷಯವನ್ನು ಕಾರಣ ನೀಡಿ ಸಮರ್ಥಿಸಿಕೊಳ್ಳಿ.

ವಿಷಯ ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–8

**ಟಿಪ್ಪಣಿ, ವರದಿ, ಪತ್ರಲೇಖನ, ಪ್ರಬಂಧ, ಆಹ್ವಾನಪತ್ರಿಕೆ, ಜಾಹೀರಾತು, ಪ್ರಕಟಣೆ ಇತ್ಯಾದಿ ದೈನಂದಿನ ವ್ಯವಹಾರಿಕ ಸಂದರ್ಭಗಳಲ್ಲಿ ಲಿಖಿತ ಅಭಿವ್ಯಕ್ತಿ ಕೌಶಲ ಬೆಳೆಸಿಕೊಳ್ಳುತ್ತಾರೆ.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | ವಿದ್ಯಾರ್ಥಿಗಳು ಮುದ್ರಿತ ಸಾಮಗ್ರಿಗಳ ಸ್ವರೂಪಗಳನ್ನು ಅರಿತು, ತಮ್ಮದೇ ವಿಷಯ, ವಿಚಾರಗಳನ್ನು ವಿವಿಧ ಬರೆವಣಿಗೆಯ ಪ್ರಕಾರಗಳಲ್ಲಿ ಬರೆಯುವ ಸಾಮರ್ಥ್ಯಗಳನ್ನು ಪಡೆದುಕೊಳ್ಳುವುದು. ಮತ್ತು ತಾನು ಕಂಡು ಅನುಭವಿಸಿದ ಸಂಗತಿಗಳನ್ನು ಲೇಖನರೂಪದಲ್ಲಿ ಬರೆಯುವ, ತನ್ನ ವಸ್ತುಗಳಿಗೆ ಜಾಹೀರಾತನ್ನು ಸಿದ್ಧಪಡಿಸುವ, ಪ್ರಕಟಣೆ ಹೊರಡಿಸುವ, ಆಹ್ವಾನ ಪತ್ರಿಕೆಗಳನ್ನು ಸಿದ್ಧಪಡಿಸುವ ಹೀಗೆ ಪ್ರತಿಯೊಂದು ವಿಷಯಗಳಿಗೂ ಸ್ಪಂದಿಸುವ ಸಾಮರ್ಥ್ಯವನ್ನು ಬೆಳೆಸುವುದು. | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಆಹ್ವಾನ ಪತ್ರಿಕೆಗಳು, ಜಾಹೀರಾತುಗಳ ಚಿತ್ರ, ಪ್ರಬಂಧಗಳ ಪುಸ್ತಕ. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | **ಚಟುವಟಿಕೆ: 1** ಆಹ್ವಾನಕ್ಕೊಂದು ಪತ್ರಿಕೆ ಬರೆಯೋಣ | ಮುದ್ರಿತ ಸಾಮಗ್ರಿಗಳ ಸ್ವರೂಪಗಳಿಗನುಗುಣವಾಗಿ ಆಹ್ವಾನ ಪತ್ರಿಕೆ, ಮತ್ತು ಪ್ರಕಟಣೆಗಳನ್ನು ರಚಿಸುವ ಸಾಮರ್ಥ್ಯ ಬೆಳೆಸುವುದು. | ಮನೆ, ಗ್ರಂಥಾಲಯ ಮತ್ತು ಶಾಲೆಗಳಲ್ಲಿ ಗಮನಿಸಿರುವ ಮುದ್ರಿತ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುತ್ತಾ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು. ಹೀಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದ ಬಳಿಕ, ತರಗತಿ ವಿದ್ಯಾರ್ಥಿಗಳನ್ನು 3 ಗುಂಪುಗಳನ್ನಾಗಿ ಮಾಡಿ ಆಹ್ವಾನ ಪತ್ರಿಕೆ ಮತ್ತು ಪ್ರಕಟಣೆ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡಿ, ಗುಂಪಿನಲ್ಲಿ ಚರ್ಚಿಸಿ ಈ ಎರಡೂ ಪ್ರಕಾರಗಳ ಸ್ವರೂಪಗಳನ್ನು ಕುರಿತು ಪಟ್ಟಿ ಮಾಡಿ ಮಂಡಿಸುವಂತೆ ಸೂಚಿಸುವುದು. ಪ್ರತೀ ಗುಂಪಿನಿಂದ ಇಬ್ಬರು ವಿದ್ಯಾರ್ಥಿಗಳಿಗೆ ಮಂಡನೆಗೆ ಅವಕಾಶ ಮಾಡಿಕೊಟ್ಟು, ಮತ್ತೊಂದು ತಂಡಕ್ಕೆ ಪ್ರತಿಕ್ರಿಯೆ ನೀಡುವಂತೆ ಸೂಚನೆ ನೀಡುವುದು. ಒಟ್ಟು ಎರಡೂ ಗುಂಪಿನಿಂದ ಸಿದ್ಧಗೊಂಡ 4 ಪತ್ರಿಕೆಗಳನ್ನು ಶಾಲೆಯ ಸೂಚನಾ ಫಲಕದಲ್ಲಿ ಹಾಕುವಂತೆ ತಿಳಿಸುವುದು. | ಅಭ್ಯಾಸ–1.1 –1.2, 1.3 ಮತ್ತು 1.4 | ಅವಲೋಕನ | |
| | **ಚಟುವಟಿಕೆ: 2** ನನ್ನದೇ ಜಾಹೀರಾತು | ತಮ್ಮದೇ ವಿಷಯಗಳಿಗೆ ಜಾಹೀರಾತುಗಳನ್ನು ಬರೆಯುವ ಕೌಶಲ ಬೆಳೆಸುವುದು. | ಜಾಹೀರಾತುಗಳಿಗೆ ಸಂಬಂಧಿಸಿದಂತೆ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾ ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ, ತರಗತಿ ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಿ ಪ್ರತೀ ಗುಂಪಿನವರಿಗೂ ಒಂದೊಂದು ಜಾಹೀರಾತು ಪ್ರತಿಗಳನ್ನು ನೀಡಿ ಗುಂಪಿನಲ್ಲಿ ಚರ್ಚಿಸುವಂತೆ ಹಾಗೂ ಆ ಜಾಹೀರಾತಿನ ಸ್ವರೂಪವನ್ನು ಕುರಿತು ಪಟ್ಟಿ ಮಾಡಿ ಮಂಡಿಸುವಂತೆ ಸೂಚಿಸುವರು. ಒಂದು ಗುಂಪು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವಾಗ ಇನ್ನೊಂದು ಗುಂಪು ಪ್ರತಿಕ್ರಿಯೆ ನೀಡುವಂತೆ ಸೂಚಿಸುವರು. ವಿದ್ಯಾರ್ಥಿಗಳ ಮಂಡನೆ ಮತ್ತು ಪ್ರತಿಕ್ರಿಯೆ ಮುಗಿದ ಬಳಿಕ, ಜಾಹೀರಾತುಗಳ ರಚನಾ ಸ್ವರೂಪವನ್ನು ಕುರಿತು ಮಾತನಾಡುವರು.<br>ವಿದ್ಯಾರ್ಥಿಗಳ ಎರಡೂ ಗುಂಪುಗಳಿಗೆ ಒಂದೊಂದು ವಿಷಯವನ್ನು ನೀಡಿ, ಗುಂಪಿನಲ್ಲಿ ಚರ್ಚಿಸಿ ಜಾಹೀರಾತೊಂದನ್ನು ಸಿದ್ಧಪಡಿಸುವಂತೆ ಸೂಚಿಸುವರು. ವಿದ್ಯಾರ್ಥಿಗಳು ಗುಂಪಿನಲ್ಲಿ ತಾವು ರಚಿಸಿದ ಜಾಹೀರಾತನ್ನು ಒಬ್ಬರು ಮಂಡಿಸುವಂತೆ, ಇನ್ನೊಂದು ಗುಂಪು ಅದಕ್ಕೆ ಪ್ರತಿಕ್ರಿಯಿಸುವಂತೆ ಸೂಚಿಸುವುದು. ವಿದ್ಯಾರ್ಥಿಗಳ ಮಂಡನೆ ಮತ್ತು ಚರ್ಚೆ ಮುಗಿದ ಬಳಿಕ ಎರಡೂ ವಿಧದ ಜಾಹೀರಾತುಗಳನ್ನು ಶಾಲೆಯ ಸೂಚನಾ ಫಲಕಕ್ಕೆ ಹಾಕಲು ಸೂಚಿಸುವುದು. | ಅಭ್ಯಾಸ: 2.1,2.2 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ: 3**<br>ವಿಷಯ ಸಂಗ್ರಹಿಸಿ ವರದಿ ಮಾಡೋಣ | ತಾನು ನೋಡಿದ, ಓದಿದ ಘಟನೆ ಸನ್ನಿವೇಶಗಳನ್ನು ಅರ್ಥಮಾಡಿಕೊಂಡು ವರದಿಯೊಂದನ್ನು ಸಿದ್ಧಪಡಿಸುವ ಸಾಮರ್ಥ್ಯ ಬೆಳೆಸುವುದು | ವರದಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುತ್ತಾ ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ, ಅವರನ್ನು ಎರಡು ಗುಂಪುಗಳನ್ನಾಗಿ ಮಾಡಿ, ವರದಿಯ ಪ್ರತಿಯೊಂದನ್ನು ಎರಡು ಗುಂಪುಗಳಿಗೆ ನೀಡಿ, ಗುಂಪಿನಲ್ಲಿ ಚರ್ಚಿಸಿ ವರದಿಯ ಸ್ವರೂಪವನ್ನು ಪಟ್ಟಿ ಮಾಡಿ ಮಂಡಿಸುವಂತೆ ಸೂಚಿಸುವುದು. ಹಾಗೆಯೇ ಒಂದು ಗುಂಪು ಮಂಡಿಸುವಾಗ ಇನ್ನೊಂದು ಗುಂಪು ಪ್ರತಿಕ್ರಿಯೆ ನೀಡುವಂತೆ ತಿಳಿಸುವುದು. ವಿದ್ಯಾರ್ಥಿಗಳು ಮಂಡಿಸಿದ ಅಂಶಗಳಿಗನುಸಾರವಾಗಿ ವರದಿಯ ರಚನೆಯ ಸ್ವರೂಪವನ್ನು ಕುರಿತು, ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.<br>ಹಂತ–2: ವಿದ್ಯಾರ್ಥಿಗಳ ಎರಡೂ ಗುಂಪುಗಳಿಗೆ ಎರಡು ಕಾರ್ಯಕ್ರಮಗಳ ಸನ್ನಿವೇಶಗಳನ್ನು ನೀಡಿ, ಗುಂಪಿನಲ್ಲಿ ಚರ್ಚಿಸಿ ವರದಿಯೊಂದನ್ನು ಸಿದ್ಧಪಡಿಸುವಂತೆ ಸೂಚಿಸುವುದು. ವಿದ್ಯಾರ್ಥಿಗಳು ಗುಂಪಿನಲ್ಲಿ ತಾವು ರಚಿಸಿದ ವರದಿಯನ್ನು ಒಬ್ಬರು ಮಂಡಿಸುವಂತೆ, ಇನ್ನೊಂದು ಗುಂಪು ಅದಕ್ಕೆ ಪ್ರತಿಕ್ರಿಯಿಸುವಂತೆ ಸೂಚಿಸುವುದು. ವಿದ್ಯಾರ್ಥಿಗಳ ಮಂಡನೆ ಮತ್ತು ಚರ್ಚೆಯಲ್ಲಿ ಶಿಕ್ಷಕರು ಭಾಗವಹಿಸಿ ವರದಿಯಲ್ಲಿನ ಬರೆವಣಿಗೆ ಸ್ವರೂಪವನ್ನು ಕುರಿತು ಸ್ಪಷ್ಟೀಕರಣವನ್ನು ನೀಡುವರು. ನಂತರ ಎರಡೂ ವಿಧದ ವರದಿಗಳನ್ನು ಶಾಲೆಯ ನೋಟೀಸ್ ಬೋರ್ಡ್‌ಗೆ ಹಾಕಲು ಸೂಚಿಸುವುದು. | ಅಭ್ಯಾಸ– 3.1,3.2 | ಅವಲೋಕನ | |
| | **ಚಟುವಟಿಕೆ: 4**<br>ನಾನೇ ಬರೆದ ಪ್ರಬಂಧ | ತಮಗೆ ಇಷ್ಟವಾದ ವಸ್ತು ವಿಷಯಗಳಿಗೆ ಪ್ರಬಂಧ ಬರೆಯುವ ಕೌಶಲ ಬೆಳೆಸುವುದು. | ವಿದ್ಯಾರ್ಥಿಗಳೊಂದಿಗೆ ಪ್ರಶ್ನೆಗಳನ್ನು ಕೇಳುತ್ತಾ ಪ್ರಬಂಧ ರಚನೆಯ ಬಗ್ಗೆ ಚರ್ಚೆಯನ್ನು ನಡೆಸುವರು. ವಿದ್ಯಾರ್ಥಿಗಳೊಂದಿಗೆ ಪ್ರಬಂಧದ ಸ್ವರೂಪದ ಬಗ್ಗೆ ಚರ್ಚಿಸುತ್ತಾ ಪ್ರಬಂಧ ರಚನೆಯಲ್ಲಿ ಅನುಸರಿಸಬಹುದಾದ ನಿಯಮಗಳನ್ನು ಪರಿಚಯಿಸುವುದು. ನಂತರ ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ಮಾಡಿ, ಪ್ರಬಂಧವನ್ನು ಓದಲು ನೀಡಿ, ಆ ಪ್ರಬಂಧದಲ್ಲಿನ ರಚನೆಯ ಸ್ವರೂಪವನ್ನು ಪಟ್ಟಿ ಮಾಡುವಂತೆ ಸೂಚಿಸುವುದು. ಗುಂಪಿನಿಂದ ಒಬ್ಬರು ತಾವು ಸಿದ್ಧಪಡಿಸಿಕೊಂಡ ಪಟ್ಟಿಯಲ್ಲಿನ ಅಂಶಗಳನ್ನು ಹಂಚಿಕೊಳ್ಳುವಂತೆ ತಿಳಿಸುವುದು. ಪ್ರಬಂಧ ರಚನೆಯಲ್ಲಿ ಅನುಸರಿಸಬಹುದಾದ ನಿಯಮಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು. ನಿಯಮಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿದ ಬಳಿಕ 'ಸ್ವಾತಂತ್ರ್ಯ ದಿನಾಚರಣೆಗೆ' ಸಂಬಂಧಿಸಿದಂತೆ ಪ್ರಬಂಧವೊಂದನ್ನು ಬರೆಯುವಂತೆ ಸೂಚಿಸುವುದು. ವಿದ್ಯಾರ್ಥಿಗಳು ಸಿದ್ಧಪಡಿಸಿದ ಪ್ರಬಂಧಗಳನ್ನು ಗಮನಿಸಿ ಶಿಕ್ಷಕರು ಹಿಮ್ಮಾಹಿತಿಯನ್ನು ನೀಡುವರು. | ಅಭ್ಯಾಸ– 4.1, 4.2 ಮತ್ತು 4.3 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯ ಅಭ್ಯಾಸ–5 ಅನ್ನು ಬಳಸಿಕೊಳ್ಳುವುದು.

**ನಿಯೋಜಿತ ಕಾರ್ಯಗಳು :** 9ನೇ ತರಗತಿ 'ಜನಪದ ಕಲೆಗಳ ವೈಭವ' ಪಾಠದ ಜನಪದ ಕಲಾ ತಂಡಗಳ (ಪ್ರತಿ ತಂಡಕ್ಕೂ ಒಂದೊಂದು ಪ್ರಬಂಧ) ಕುರಿತು ಪ್ರಬಂಧವನ್ನು ಬರೆಯಿರಿ.
9ನೇ ತರಗತಿ 'ಚೆನ್ನ ಬೈರಾದೇವಿ' ನಾಟಕಕ್ಕೆ ಜಾಹೀರಾತೊಂದನ್ನು ಸಿದ್ಧಪಡಿಸಿ.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–9

**ಕಥೆ, ನಾಟಕ, ಕಾವ್ಯ, ಜೀವನಚರಿತ್ರೆ ಆತ್ಮಕಥೆಗಳಲ್ಲಿನ ವಿಚಾರ ಮತ್ತು ಸನ್ನಿವೇಶಗಳನ್ನು ತಮ್ಮದೇ ಆದ ರೀತಿ, ಶೈಲಿಯಲ್ಲಿ ಸೃಜನಾತ್ಮಕವಾಗಿ ಅಭಿವ್ಯಕ್ತಪಡಿಸುತ್ತಾರೆ.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ಕಥೆ, ಕವಿತೆ, ನಾಟಕ, ಕಾವ್ಯ, ಜೀವನಚರಿತ್ರೆ, ಆತ್ಮಕಥೆ, ಪ್ರಬಂಧ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಓದಿ ಗ್ರಹಿಸಿಕೊಳ್ಳುವ ಮತ್ತು ಅವುಗಳ ಬಗ್ಗೆ ತನ್ನದೇ ಶೈಲಿಯಲ್ಲಿ ಸೃಜನಾತ್ಮಕವಾಗಿ ವಿವಿಧ ಮಾಧ್ಯಮಗಳ ಮೂಲಕ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಆತ್ಮಚರಿತ್ರೆ, ಜೀವನಚರಿತ್ರೆ ಪುಸ್ತಕಗಳು. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | **ಚಟುವಟಿಕೆ: 1** ಪದ್ಯಕ್ಕೊಂದು ನಾಟಕ ರಚಿಸೋಣ | ಪದ್ಯವನ್ನು ನಾಟಕವಾಗಿ ಪರಿವರ್ತಿಸುವ ಕೌಶಲ ಬೆಳೆಸುವುದು. | ವಿದ್ಯಾರ್ಥಿಗಳನ್ನು 2 ಗುಂಪುಗಳಾಗಿ ವಿಂಗಡಿ 'ಗೋವಿನ ಹಾಡು' ಪದ್ಯದ ಪ್ರತಿಗಳನ್ನು ನೀಡಿ, ಪದ್ಯವನ್ನು ಓದಿ ಅಥವಾ ರಾಗಬದ್ಧವಾಗಿ ಹಾಡಿ, ಪದ್ಯದಲ್ಲಿ ಚಿತ್ರಣಗೊಂಡಿರುವ ಸ್ಥಳಗಳನ್ನು ಪಟ್ಟಿ ಮಾಡುವುದು. (ಉದಾ: ಕಾಡು, ಕೊಟ್ಟಿಗೆ) • ಪದ್ಯದಲ್ಲಿ ಬರುವ ಪಾತ್ರಗಳನ್ನು ಪಟ್ಟಿ ಮಾಡಿಕೊಳ್ಳುವುದು. ಪದ್ಯದಲ್ಲಿನ ಪಾತ್ರಗಳು, ಆ ಪಾತ್ರಗಳ ವೈಶಿಷ್ಟ್ಯ, ಸ್ಥಳಗಳು ಹಾಗೂ ಒಟ್ಟಂದ ಸಾರಾಂಶವನ್ನು ಕುರಿತು ಮಾತನಾಡುವುದು. ವಿದ್ಯಾರ್ಥಿಗಳನ್ನು 2 ಗುಂಪುಗಳನ್ನಾಗಿ ಮಾಡಿ, ಪಾತ್ರಗಳಿಗನುಸಾರವಾಗಿ ಗುಂಪಿನಲ್ಲಿ ಚರ್ಚಿಸುತ್ತಾ, ಸಂಭಾಷಣೆಯನ್ನು ಬರೆಯುವಂತೆ ಸೂಚಿಸುವರವಿದ್ಯಾರ್ಥಿಗಳು ಗುಂಪಿನಲ್ಲಿ ಸಿದ್ಧಪಡಿಸಿದ ನಾಟಕವನ್ನು ಮಂಡಿಸಲು ಅವಕಾಶವನ್ನು ಮಾಡಿಕೊಡುವುದು. ನಂತರ ಒಂದು ಗುಂಪು ಮಂಡಿಸಿದ ನಂತರ, ಇನ್ನೊಂದು ಗುಂಪು ಪ್ರತಿಕ್ರಿಯಿಸುವಂತೆ ಸೂಚಿಸುವುದು. ಕೊನೆಯಲ್ಲಿ ಪಾತ್ರಗಳ ಸಂಭಾಷಣೆಯಲ್ಲಿ ವಿದ್ಯಾರ್ಥಿಗಳು ಬಳಸಿರುವ ಬರೆವಣಿಗೆ ಶೈಲಿಯಲ್ಲಿ ಏನೆಲ್ಲಾ ಬದಲಾವಣೆ ಮಾಡಿಕೊಳ್ಳಬಹುದು (ನಾಟಕಕ್ಕೆ ಸಂಬಂಧಿಸಿದಂತೆ) ಎಂಬುದನ್ನು ತಿಳಿಸುವುದು. | ಕಲಿಕಾ ಹಾಳೆಯ ಅಭ್ಯಾಸ: 1.2 ಮತ್ತು 1.3 | ಅವಲೋಕನ | |
| | **ಚಟುವಟಿಕೆ: 2** ಇತರರ ಆತ್ಮ ಕಥೆಯ ತಿಳಿಯೋಣ | ಆತ್ಮಕಥನದ ಸ್ವರೂಪವನ್ನು ಅರ್ಥೈಸಿಕೊಳ್ಳುವರು. | ಹಂತ–1: ಆತ್ಮ ಕಥೆಯ ಬಗ್ಗೆ ಒಂದು ಪರಿಕಲ್ಪನೆಯನ್ನು ಕಟ್ಟಿಕೊಡುತ್ತಾ, ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಾ, ವಿದ್ಯಾರ್ಥಿಗಳನ್ನು 4 ಗುಂಪುಗಳನ್ನಾಗಿ ಮಾಡಿ ಗಾಂಧೀಜಿಯವರ ಆತ್ಮ ಕಥನದ ತುಣುಕೊಂದನ್ನು ಕೊಟ್ಟು ಗುಂಪಿನಲ್ಲಿ ಓದಿ, ಸಾರಾಂಶವೊಂದನ್ನು ಸಿದ್ಧಪಡಿಸಿ ಗುಂಪಿನಿಂದ ಒಬ್ಬರು ಮಂಡಿಸಲು ತಿಳಿಸುವುದು. ವಿದ್ಯಾರ್ಥಿಗಳ ಮಂಡನೆಯ ಬಳಿಕ, ಲೇಖನದಲ್ಲಿ ಉಲ್ಲೇಖಿಸಿರುವ ವಿಷಯ ಹಾಗೂ ಅದರ ನಿರೂಪಣೆಯನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾ ಆತ್ಮ ಕಥೆಯ ಸ್ವರೂಪವನ್ನು ವಿವರಿಸುವುದು.<br>ಹಂತ–2: ತಮ್ಮದೇ ಜೀವನದ ಒಂದು ಘಟನೆಯನ್ನು ಆತ್ಮ ಕಥನದ ರೀತಿಯಲ್ಲಿ ಬರೆಯಲು ತಿಳಿಸುವುದು. ಶಿಕ್ಷಕರು ವಿದ್ಯಾರ್ಥಿಗಳು ಸಿದ್ಧಪಡಿಸಿದ ಘಟನೆಗಳನ್ನು, ತಮ್ಮ ಸ್ನೇಹಿತರಲ್ಲೇ ಅದಲು ಬದಲು ಮಾಡಿಕೊಂಡು ಓದಲು ಹೇಳಿ ಆ ಘಟನೆಯ ಕುರಿತು ತಮ್ಮ ಅಭಿಪ್ರಾಯವನ್ನು ಮೌಖಿಕವಾಗಿ ಹೇಳುವಂತೆ ಸೂಚಿಸುವುದು. ವಿದ್ಯಾರ್ಥಿಗಳ ಮಂಡನೆ ಮುಗಿದ ಬಳಿಕ, ಅವರ ಬರೆವಣಿಗೆಗಳನ್ನು ಕುರಿತು ತಮ್ಮ ಅನಿಸಿಕೆಯನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುವುದು. | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ: 2.1, 2.2 ಮತ್ತು 2.3 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ: 3** ಜೀವನ ಚರಿತ್ರೆಯನ್ನು ತಿಳಿಯೋಣ | ಜೀವನ ಚರಿತ್ರೆಗಳನ್ನು ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯ ಬೆಳೆಸುವುದು | ವಿದ್ಯಾರ್ಥಿಗಳಿಗೆ ಜೀವನ ಚರಿತ್ರೆಯ ಬಗ್ಗೆ ಪರಿಕಲ್ಪನೆಯನ್ನು ಮೂಡಿಸಲು ಕೆಳಗಿನ ಪ್ರಶ್ನೆಗಳನ್ನು ಕೇಳುವುದು. • ಜೀವನ ಚರಿತ್ರೆ ಎಂದರೆ ಏನು? • ನೀವು ಯಾವುದಾದರೂ ಜೀವನ ಚರಿತ್ರೆಯನ್ನು ಕೇಳಿದ್ದೀರಾ ಅಥವಾ ಓದಿದ್ದೀರಾ? • ಜೀವನ ಚರಿತ್ರೆಯ ಸ್ವರೂಪ ಹೇಗಿರುತ್ತದೆ? ಹೀಗೆ ಪ್ರಶ್ನೆಗಳನ್ನು ಕೇಳಿ ಚರ್ಚಿಸುತ್ತಾ, ವಿದ್ಯಾರ್ಥಿಗಳನ್ನು 4 ಗುಂಪುಗಳನ್ನಾಗಿ ವಿಂಗಡಿಸಿ, 9ನೇ ತರಗತಿಯ **'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್'** ಜೀವನ ಚರಿತ್ರೆಯನ್ನು ಓದಲು ಹೇಳುವುದು.<br>ನಂತರ ಜೀವನ ಚರಿತ್ರೆ ಮತ್ತು ಆತ್ಮ ಚರಿತ್ರೆಗಿರುವ ವ್ಯತ್ಯಾಸವನ್ನು ಪಟ್ಟಿ ಮಾಡಿಸಿ. ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಸಿದ್ಧಪಡಿಸಿದ ಬರೆವಣಿಗೆಯನ್ನು, ಗುಂಪಿನಿಂದ ಒಬ್ಬರು ಮಂಡಿಸಲು ತಿಳಿಸುವುದು. ವಿದ್ಯಾರ್ಥಿಗಳ ಮಂಡನೆಯು ಮುಗಿದ ಬಳಿಕ, ಜೀವನ ಚರಿತ್ರೆಯ ಮಹತ್ತ್ವವನ್ನು ತಿಳಿಸುತ್ತ **'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್'** ಬರೆಹವನ್ನು ಉಲ್ಲೇಖಿಸುತ್ತಾ ಮಾತನಾಡುವುದು.<br>ಹಂತ –2 ವಿದ್ಯಾರ್ಥಿಗಳ 4 ಗುಂಪುಗಳಿಗೆ 9ನೇ ತರಗತಿಯ **'ನಾ ಕಂಡಂತೆ ಬಿ.ಜೆ.ಎಲ್ ಸ್ವಾಮಿ** ಪಾಠವನ್ನು ಓದಿ, ಬಿ.ಜೆ.ಎಲ್ ಅವರ ವ್ಯಕ್ತಿತ್ವವನ್ನು ಜೀವನ ಚರಿತ್ರೆಯಾಗಿ ಮಾರ್ಪಡಿಸಿ ಬರೆಯುವಂತೆ ತಿಳಿಸುವುದು.<br>ವಿದ್ಯಾರ್ಥಿಗಳು ಗುಂಪಿನಲ್ಲಿ ಸಿದ್ಧಪಡಿಸಿದ ಬರೆವಣಿಗೆಯನ್ನು ಗುಂಪಿನಿಂದ ಒಬ್ಬರಿಗೆ ಮಂಡಿಸಲು ಶಿಕ್ಷಕರು ಅವಕಾಶ ಮಾಡಿಕೊಡುವುದು. ಒಂದು ಗುಂಪು ಮಂಡಿಸುವಾಗ ಇನ್ನೊಂದು ಗುಂಪು ಪ್ರತಿಕ್ರಿಯಿಸುವಂತೆ ಸೂಚಿಸುವರು. ಕೊನೆಯಲ್ಲಿ ವಿದ್ಯಾರ್ಥಿಗಳ ಬರೆವಣಿಗೆಯನ್ನು ಉಲ್ಲೇಖಿಸುತ್ತಾ ಜೀವನ ಚರಿತ್ರೆಯ ಬರೆವಣಿಗೆ ಸ್ವರೂಪವನ್ನು ಕುರಿತು ಮಾತನಾಡುವುದು. | ಕಲಿಕಾ ಹಾಳೆಯ ಅಭ್ಯಾಸ: 3.1, 3.2 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ ಅಭ್ಯಾಸ–4 ರಲ್ಲಿ ಕುವೆಂಪು ಅವರ ನೆನಪಿನ ದೋಣಿಯಲ್ಲಿ ಎಂಬ ಆತ್ಮಚರಿತ್ರೆಯನ್ನು ಬಳಸುವುದು.

**ನಿಯೋಜಿತ ಕಾರ್ಯಗಳು :** 9ನೇ ತರಗತಿಯ "ಆದರ್ಶಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್" ಎಂಬ ಗದ್ಯಭಾಗವನ್ನು (ಜೀವನ ಚರಿತ್ರೆ) ಓದಿ, ನಿಮ್ಮದೇ ಮಾತುಗಳಲ್ಲಿ ಅಭಿಪ್ರಾಯವನ್ನು ಬರೆಯುವುದು.
ಆತ್ಮಚರಿತ್ರೆಯ ಭಾಗವನ್ನು ಜೀವನಚರಿತ್ರೆಯ ಭಾಗವಾಗಿ, ಜೀವನಚರಿತ್ರೆಯ ಭಾಗವನ್ನು ಆತ್ಮಚರಿತ್ರೆಯ ಭಾಗವಾಗಿ ಪರಿವರ್ತಿಸಿಕೊಂಡು ಬರೆದು ತರಲು ನೀಡುವುದು.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–10

## ಚರ್ಚೆ ಮತ್ತು ಸಂಭಾಷಣೆಗಳಲ್ಲಿ ಭಾಗವಹಿಸಿ ತಾರ್ಕಿಕ ವಾದವನ್ನು ಮಂಡಿಸುವುದು.

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| **ಉದ್ದೇಶಗಳು** | ವಿದ್ಯಾರ್ಥಿಗಳು ತಮ್ಮ ನಿತ್ಯಜೀವನದಲ್ಲಿನ ಲೌಖಿಕ ವ್ಯವಹಾರ ನಡೆಸಲು, ತಮ್ಮ ನೆರೆಹೊರೆಯವರೊಂದಿಗೆ ಸೌಹಾರ್ದಯುತವಾಗಿ ಸಂವಹನ ಮಾಡಲು, ಅನುಕೂಲವಾಗಿಸುವುದು. ಚರ್ಚೆ ಮತ್ತು ಸಂಭಾಷಣೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಪ್ರೇರೇಪಿಸುವುದು. | | | | | |
| **ಕಲಿಕಾ ಸಾಮಗ್ರಿಗಳು** | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಸಂದರ್ಶನ ಪ್ರಶ್ನಾವಳಿ, ಪರಿಸರದ ಚಿತ್ರಗಳು. | | | | | |
| **ಅವಧಿ** | **ಚಟುವಟಿಕೆಗಳು** | **ಚಟುವಟಿಕೆಯ ಉದ್ದೇಶ** | **ತರಗತಿ ಪ್ರಕ್ರಿಯೆ** | **ಮೌಲ್ಯಮಾಪನ** | | **ಶಿಕ್ಷಕರ ಸ್ವ ಅವಲೋಕನ** |
| | | | | **ಸಾಧನಗಳು** | **ತಂತ್ರಗಳು** | |
| | **ಚಟುವಟಿಕೆ: 1** ಕಥೆ ಕೇಳೋಣಾ ಬನ್ನಿ... | ವಿದ್ಯಾರ್ಥಿಗಳು ಕಥೆಯನ್ನು ಆಲಿಸಿ ಅರ್ಥೈಸಿಕೊಂಡು ಚರ್ಚಿಸುವುದು. | ಕತ್ತೆಯ ಉಪಾಯ ಮತ್ತು ಜೇಡರ ಬಲೆ ಎರಡು ಕಥೆಗಳನ್ನು ಧ್ವನಿ ಏರಿಳಿತದೊಂದಿಗೆ ಹಾಗೂ ಹಾವಭಾವದೊಂದಿಗೆ ಹೇಳುವುದು. ನಂತರ ತರಗತಿಯ ವಿದ್ಯಾರ್ಥಿಗಳನ್ನು ಎರಡು ಗುಂಪು ಮಾಡಿ ಎರಡು ಗುಂಪಿಗೂ ಅದೇ ಕಥೆಯನ್ನು ನೀಡುವರು. ಹಾಗೂ ಪ್ರತಿ ಗುಂಪಿಗೂ ಕಾಲಾವಕಾಶವನ್ನು ನೀಡಿ, ತಾವು ಓದಿದ ಕಥೆಯ ಸಾರಾಂಶವನ್ನು ಪಟ್ಟಿಮಾಡಿಕೊಳ್ಳಲು ಮತ್ತು ಕಥೆಯಲ್ಲಿ ಯಾವುದು ಇಷ್ಟವಾಯಿತು. ಯಾವುದು ಇಷ್ಟವಾಗಲಿಲ್ಲ ಮತ್ತು ಏಕೆ ಎಂಬ ಸೂಚನೆಯನ್ನು ನೀಡಿ, ಸಮಯ ನೀಡುವುದು. ನಂತರದಲ್ಲಿ ಎರಡು ತಂಡಕ್ಕೂ ಕಥೆಯನ್ನು ಮಂಡನೆ ಮಾಡಲು ಅವಕಾಶ ಕಲ್ಪಿಸುವರು ನಂತರ ಪ್ರಶ್ನೆಗಳನ್ನು ಕೇಳುತ್ತಾ ವಿದ್ಯಾರ್ಥಿಗಳ ಜೊತೆ ಚರ್ಚೆ ಮಾಡುವುದು. | ಕಲಿಕಾ ಹಾಳೆಯ ಅಭ್ಯಾಸ – 1.1 | ಅವಲೋಕನ | |
| | **ಚಟುವಟಿಕೆ: 2** ಚಿತ್ರದೊಂದಿಗೆ ಚರ್ಚಿಸೋಣ | ವಿದ್ಯಾರ್ಥಿಗಳು ಪ್ರತಿನಿತ್ಯ ಗಮನಿಸುವ ಸನ್ನಿವೇಶಗಳನ್ನು ಅರ್ಥೈಸಿಕೊಂಡು ತಾರ್ಕಿಕವಾಗಿ ಚಿಂತಿಸಿ, ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುವುದು. | ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೂ ಕೆಳಗಿನ ಚಿತ್ರವನ್ನು ನೀಡುವುದು. ಚಿತ್ರದಲ್ಲಿ ಗಮನಿಸಿದಂತಹ ಅಂಶಗಳನ್ನು ಗುರುತಿಸಲು ತಿಳಿಸುವುದು. ವಿದ್ಯಾರ್ಥಿಗಳಿಂದ ಬಂದ ಉತ್ತರಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುತ್ತಾ ಇಂತಹ ಸನ್ನಿವೇಶವು ತಮ್ಮ ಸುತ್ತಮುತ್ತಲು ಕಂಡುಬರಲು ಕಾರಣಗಳನ್ನು ಚರ್ಚಿಸಿ, ಸಮಸ್ಯೆಗೆ ಪರಿಹಾರವನ್ನು ತಾರ್ಕಿಕವಾಗಿ ಆಲೋಚಿಸಿ ಕಂಡುಕೊಳ್ಳುವಂತೆ ಅನುವು ಮಾಡಿಕೊಡುವುದು.    | ಕಲಿಕಾ ಹಾಳೆಯ ಅಭ್ಯಾಸ–2.1 | ಅವಲೋಕನ | |
| | **ಚಟುವಟಿಕೆ: 3** ಚಿಂತಿಸುತ್ತಾ ಚರ್ಚಿಸೋಣ | ವಿದ್ಯಾರ್ಥಿಗಳು ಉದ್ದೇಶಿತ ಸನ್ನಿವೇಶಕ್ಕೆ ತಕ್ಕಂತೆ ಚಿಂತಿಸಿ ಪ್ರಶ್ನೆಗಳನ್ನು ರಚಿಸಿ ತಮ್ಮ ತಮ್ಮ ವಾದಗಳನ್ನು ಮಂಡಿಸುವುದು. | 9ನೇ ತರಗತಿಯ **'ರಾಮರಾಜ್ಯ'** ಪಠ್ಯವನ್ನು ಬಳಸಿಕೊಳ್ಳುವುದು. ಮೊದಲಿಗೆ ರಾಮಾಯಣದ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವುದು. ನಂತರ ವಿದ್ಯಾರ್ಥಿಗಳನ್ನು ಎರಡು ಗುಂಪು ಮಾಡಿ, ಸದರಿ ಪಠ್ಯವನ್ನು ಓದಿ ಅರ್ಥಮಾಡಿಕೊಳ್ಳಲು ಸೂಚಿಸುವುದು. ಈ ಸಂದರ್ಭದಲ್ಲಿ ಪಠ್ಯವನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗುವಂತೆ ಪೂರಕ ಪ್ರಶ್ನೆಗಳನ್ನು ಕೇಳುತ್ತಾ ತರಗತಿಯನ್ನು ಅನುಕೂಲಿಸುವರು. ವಿದ್ಯಾರ್ಥಿಗಳು ಎರಡು ಗುಂಪಿನಲ್ಲಿ 'ರಾಮರಾಜ್ಯ ಪಠ್ಯವನ್ನು ಓದಿದ ನಂತರ ಪಾಠದ ಮುಖ್ಯಾಂಶವು ಉತ್ತರವಾಗಿ ಬರುವಂತೆ ಸಾಧ್ಯವಿರುವಷ್ಟು ಪ್ರಶ್ನೆಗಳನ್ನು | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1 | ಅವಲೋಕನ | |

| | | | | | | |
|---|---|---|---|---|---|---|
| | | | ಗುಂಪಿನಲ್ಲಿ ತಯಾರಿಸಲಿ. ಪ್ರತಿಯೊಂದು ಗುಂಪಿನಿಂದ ಒಬ್ಬೊಬ್ಬರು ಮಂಡಿಸಲಿ. ಒಂದು ಗುಂಪಿನವರು ಮಂಡಿಸುವಾಗ ಉಳಿದ ಗುಂಪಿನವರು ಆ ಪ್ರಶ್ನೆ ಸರಿಯಾಗಿದೆಯೇ? ಅದಕ್ಕೆ ಸರಿಯಾದ ಉತ್ತರ ಪಠ್ಯದಲ್ಲಿ ದೊರಕುತ್ತದೆಯೇ? ಎಂಬುದನ್ನು ಗಮನಿಸಲಿ. ಅತೀ ಹೆಚ್ಚು ಉತ್ತಮ ಪ್ರಶ್ನೆಗಳನ್ನು ತಯಾರಿಸಿದ ಗುಂಪನ್ನು ಅಭಿನಂದಿಸುವುದು.. | | | |
| | **ಚಟುವಟಿಕೆ: 4**<br>ಸಂಭಾಷಣೆ ಬರೆದು ಅಭಿನಯಿಸೋಣ | ಪದ್ಯವನ್ನು ಸಂಭಾಷಣೆಯನ್ನಾಗಿ ರೂಪಾಂತರಿಸುವುದು ಮತ್ತು ಅಭಿನಯಿಸುವುದು. | ಹಂತ–1: ಸಂಭಾಷಣೆಯನ್ನು ಬರೆಯೋಣ<br>ಜನಪದ ಗೀತೆ–ಕೈ ತುತ್ತು ತಿನಿಸಿದ್ದೆ– ಪದ್ಯವನ್ನು ವಿದ್ಯಾರ್ಥಿಗಳಿಗೆ ಓದಲು ನೀಡು.ವುದು. ನಂತರ ಅದರ ಸಾರಾಂಶವನ್ನು ಕುರಿತು ಚರ್ಚಿಸುವರು. ಹಾಗೆ ಸದರಿ ಪಠ್ಯಕ್ಕೆ ಸಂಭಾಷಣೆಯನ್ನು ಬರೆಯಲು ಸೂಚಿಸುವುದು.<br>ಹಂತ – 2: ಬರೆದ ಸಂಭಾಷಣೆಗೆ ಅಭಿನಯ ಮಾಡೋಣ.<br>ಶಿಕ್ಷಕರು ವಿದ್ಯಾರ್ಥಿಗಳನ್ನು ಗುಂಪು ಮಾಡಿ ತಾವು ಬರೆದ ಸಂಭಾಷಣೆಯನ್ನು ಬಳಸಿಕೊಂಡು ಅಭಿನಯ ಮಾಡಲು ಸೂಚಿಸುವುದು.. ವಿದ್ಯಾರ್ಥಿಗಳು ಅಭಿನಯಿಸಿದ ಮೇಲೆ ಅವರನ್ನು ಅಭಿನಂದಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ– 4.1 | ಅವಲೋಕನ | |
| | **ಚಟುವಟಿಕೆ: 5**<br>ನಮ್ಮೂರ ವೀರ ಯೋಧರನ್ನು ಸಂದರ್ಶಿಸೋಣ | ಇತರರೊಂದಿಗೆ ಸಂದರ್ಶಿಸುತ್ತಾ ಸಂಭಾಷಣೆಯನ್ನು ನಡೆಸುವ ಕೌಶಲವನ್ನು ವೃದ್ಧಿಸುವುದು. | ಸಂದರ್ಶನ ಮಾಡುವ ಪ್ರಕ್ರಿಯೆಯನ್ನು ಅರ್ಥಮಾಡಿಸುವ ಪ್ರಕ್ರಿಯೆಯನ್ನು ಅನುಕೂಲಿಸುವುದು. ವಿದ್ಯಾರ್ಥಿಗಳ ಜೊತೆ ಚರ್ಚಿಸಿ ಸಂದರ್ಶನದ ಪ್ರಶ್ನಾವಳಿಯನ್ನು ಕಪ್ಪುಹಲಗೆಯ ಮೇಲೆ ಬರೆಯುವರು. (ಯೋಧರು ಇಲ್ಲದಿದ್ದರೆ ಬೇರೆ ಯಾರಾದರೂ ಸಾಧಕರನ್ನು ಸಹ ಪರಿಗಣಿಸುವಮತೆ ತಿಳಿಸುವುದು.) | ಸಂದರ್ಶನ ಪ್ರಶ್ನಾವಳಿ ಹಾಳೆ | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯ ಅಭ್ಯಾಸ –6 ಬಳಸಿಕೊಳ್ಳುವುದು.

**ನಿಯೋಜಿತ ಕಾರ್ಯಗಳು :** ಸಾಧಕರನ್ನು ಸಂದರ್ಶಿಸಲು ಮಕ್ಕಳಿಗೆ ನಿಯೋಜಿತ ಕಾರ್ಯ ನೀಡುವುದು.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

# ಕಲಿಕಾ ಫಲ–11

**ಪಾತ್ರಗಳ ವಿಶ್ಲೇಷಣೆ, ಸಂಭಾಷಣೆ, ಪಾತ್ರಗಳ ವರ್ತನೆಗಳಂತಹ ವಿವಿಧ ಶೈಲಿಗಳ ಸಾಹಿತ್ಯವನ್ನು ಹೋಲಿಕೆ ಮಾಡುವುದು.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ವಿವಿಧ ಸಾಹಿತ್ಯ ಪ್ರಕಾರಗಳಾದ ಕಥೆ, ಕವನ, ಕಾವ್ಯ, ನಾಟಕ, ರೂಪಕ, ಆತ್ಮಚರಿತ್ರೆ, ಜೀವನ ಚರಿತ್ರೆಗಳಲ್ಲಿ ಬರುವ ಪಾತ್ರ ,ಪಾತ್ರಗಳ ನಡುವಿನ ಸಂಭಾಷಣೆ, ವರ್ತನೆ, ಮನೋಭಾವವನ್ನು ಹೋಲಿಕೆ ಮಾಡುವ ಸಾಮರ್ಥ್ಯ ಹಾಗೂ ಹಾಗೆಯೇ ನಿತ್ಯ ಜೀವನದಲ್ಲಿ ನಡೆಯುವ ಘಟನೆ ಸನ್ನಿವೇಶ ಮತ್ತು ವ್ಯಕ್ತಿಗಳ ವರ್ತನೆಯನ್ನು ಹೋಲಿಕೆ ಮಾಡಿ ವಿಶ್ಲೇಷಣೆಗೆ ಒಳಪಡಿಸುವ ಸಾಮರ್ಥ್ಯ ಬೆಳೆಸುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಚಿತ್ರಗಳು. | | | | | |

| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
|---|---|---|---|---|---|---|
| | | | | ಸಾಧನಗಳು | ತಂತ್ರಗಳು | |
| | **ಚಟುವಟಿಕೆ: 1** ಚಿತ್ರ ನೋಡಿ ಹೋಲಿಕೆ ಮಾಡೋಣ | ಸನ್ನಿವೇಶಗಳನ್ನು ಹೋಲಿಕೆ ಮಾಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಾಮರ್ಥ್ಯ ಬೆಳೆಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–1.1 ರಲ್ಲಿನ ಚಿತ್ರವನ್ನು ಸೂಕ್ಷ್ಮವಾಗಿ ವೀಕ್ಷಿಸಲು ವಿದ್ಯಾರ್ಥಿಗಳಿಗೆ ಸೂಚಿಸುವುದು. ನಂತರ ತಮ್ಮ ಅಭಿಪ್ರಾಯವನ್ನು ಬರೆದು, ಅದನ್ನು ತರಗತಿಯಲ್ಲಿ ಮಂಡಿಸಲು ಅವಕಾಶವನ್ನು ನೀಡುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–1.1 1.2 | ಅವಲೋಕನ | |
| | **ಚಟುವಟಿಕೆ: 2** ಕಥೆ ಓದಿ ಚರ್ಚಿಸೋಣ | ಕಥೆಯನ್ನು ಓದಿ ಅಲ್ಲಿನ ಪಾತ್ರ ಮತ್ತು ಸನ್ನಿವೇಶವನ್ನು ವಿಶ್ಲೇಷಿಸುವ, ಇತರ ಸಾಹಿತ್ಯ ಪ್ರಕಾರದೊಂದಿಗೆ ಹೋಲಿಕೆ ಮಾಡುವ ಸಾಮರ್ಥ್ಯ ಬೆಳೆಸುವುದು. | ವಿದ್ಯಾರ್ಥಿಗಳನ್ನು ಗುಂಪು ಮಾಡಿ, ಕಪ್ಪೆಯ ವ್ಯಥೆ ಕಥೆಯನ್ನು ಓದಿ, ಗುಂಪಿನಲ್ಲಿ ಚರ್ಚಿಸಲು ಅವಕಾಶ ಮಾಡಿಕೊಡುವುದು. ಕಥೆಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ, ಕಥೆಯ ಸಾರಾಂಶವನ್ನು ತರಗತಿಯ ಎಲ್ಲಾ ವಿದ್ಯಾರ್ಥಿಗಳ ಮುಂದೆ ಮಂಡಿಸುವರು.<br>ಹಂತ–2: ಸದರಿ ಕಥೆಗೆ ಸಂಬಂಧಿಸಿದ ಕಲಿಕಾ ಹಾಳೆಯ ಅಭ್ಯಾಸದಲ್ಲಿರುವ ಪ್ರಶ್ನೆಗಳಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತರಿಸುವಂತೆ ಸೂಚಿಸುವುದು. ನಂತರ ವಿದ್ಯಾರ್ಥಿಗಳು ಬರೆದಿರುವುದನ್ನು ತನ್ನ ಸಹಪಾಠಿಗಳ ಜೊತೆ ಅದಲು ಬದಲು ಮಾಡಿಕೊಂಡು ಓದಿ ತನ್ನ ಬರೆವಣಿಗೆ ಮತ್ತು ಚಿಂತನೆಯನ್ನು ಉತ್ತಮೀಕರಿಸಿಕೊಳ್ಳಲು ಅವಕಾಶ ನೀಡುವುದು.<br>ಹಂತ–3: ಪರಿಸರ ಮಾಲಿನ್ಯ ಪದ್ಯವನ್ನು ಕೆಲವು ವಿದ್ಯಾರ್ಥಿಗಳಿಗೆ ಓದಲು ಅವಕಾಶವನ್ನು ನೀಡುವುದು. ನಂತರ ಸದರಿ ಕಥೆ ಮತ್ತು ಪದ್ಯವನ್ನು ಹೋಲಿಸಿ ಬರೆಯಲು ಸೂಚಿಸುವುದು. ನಂತರ ಮಂಡನೆಗೆ ಅವಕಾಶವನ್ನು ನೀಡುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–2.1 | ಅವಲೋಕನ | |
| | **ಚಟುವಟಿಕೆ: 3** ಕಾವ್ಯ ಓದಿ ಚರ್ಚಿಸೋಣ. | ಹೊಸಗನ್ನಡ ಮತ್ತು ನಡುಗನ್ನಡ ಕಾವ್ಯದ ವಸ್ತು, ಪಾತ್ರಗಳನ್ನು ಹೋಲಿಕೆ ಮಾಡಿ ವಿಶ್ಲೇಷಣೆ ಮಾಡುವ ಸಾಮರ್ಥ್ಯ ಬೆಳೆಸುವುದು. | ಹಂತ–1: **ಹೊಸಗನ್ನಡ ಪದ್ಯವನ್ನು ಅರ್ಥಮಾಡಿಕೊಳ್ಳೋಣ**<br>**'ಪಾರಿವಾಳ'** ಪಠ್ಯವನ್ನು ಬಳಸುವುದು. ವಿದ್ಯಾರ್ಥಿಗಳಿಗೆ ಗುಂಪಿನಲ್ಲಿ ಪದ್ಯವನ್ನು ಓದಲು ಸೂಚಿಸುವುದು. ಮತ್ತು ಹೊಸಪದಗಳ ಅರ್ಥವನ್ನು ಶಬ್ದಕೋಶದ ಸಹಾಯದಿಂದ ಅರ್ಥಮಾಡಿಕೊಳ್ಳಲು ಹೇಳುವುದು.<br>ಹಂತ–2: **ನಡುಗನ್ನಡ ಪದ್ಯವನ್ನು ಅರ್ಥಮಾಡಿಕೊಳ್ಳೋಣ**<br>'ರಾಘವಾಂಕನ' **'ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲುಹು'** ಎಂಬ ಕಾವ್ಯವನ್ನು ಬಳಸುವುದು. ಮೊದಲಿಗೆ ಕಾವ್ಯದ ಹಿನ್ನೆಲೆ ಮತ್ತು ಕಥೆಯನ್ನು ನಿರೂಪಿಸುವುದು. ಪದ್ಯವನ್ನು ಬಿಡಿಸಿ | ಕಲಿಕಾ ಹಾಳೆ ಯಲ್ಲಿನ ಅಭ್ಯಾಸ–3.1 ಮತ್ತು ಅಭ್ಯಾಸ 3.2 | ಅವಲೋಕನ | |

| | | | | | | |
|---|---|---|---|---|---|---|
| | | | ಓದುವುದು., ವಿದ್ಯಾರ್ಥಿಗಳಿಗೆ ಗುಂಪಿನಲ್ಲಿ ಪದ್ಯವನ್ನು ಓದಲು ಸೂಚಿಸುವುದು. ನಂತರ ಮತ್ತು ವಿದ್ಯಾರ್ಥಿಗಳು ಜೊತೆ ಸೇರಿ ಓದುವರು. ವಿದ್ಯಾರ್ಥಿಗಳನ್ನು ಗುಂಪು ಮಾಡಿ ಪ್ರತಿ ತಂಡಕ್ಕೆ ಒಂದೊಂದು ಪದ್ಯವನ್ನು ನೀಡಿ ಸೂಚನೆಯನ್ನು ನೀಡುವುದು. | | | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ ಅಭ್ಯಾಸ–4.1 ರಲ್ಲಿನ **'ಶಶಾಂಕನ'** ಕಥೆಯನ್ನು ಬಳಸುವುದು.

**ನಿಯೋಜಿತ ಕಾರ್ಯಗಳು :** ವಾಚನಾಲಯದಲ್ಲಿನ ಕಥೆ ಅಥವಾ ನಾಟಕವನ್ನು ಓದಿ, ಅದರಲ್ಲಿರುವ ಪಾತ್ರಗಳ ಬಗ್ಗೆ ಅಭಿಪ್ರಾಯವನ್ನು ಬರೆಯಲು ನೀಡುವುದು.
ಎರಡು ಕಥೆ ಅಥವಾ ಪದ್ಯವನ್ನು ಓದಿ, ಅದರಲ್ಲಿರುವ, ವಸ್ತು, ಪಾತ್ರಗಳು ಮತ್ತು ಸನ್ನಿವೇಶಗಳನ್ನು ಹೋಲಿಸಿ ಬರೆಯಲು ನೀಡುವುದು.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ಕಲಿಕಾ ಫಲ–12

**ತಮ್ಮ ಆಲೋಚನೆಗಳನ್ನು ಪದ್ಯ ಮತ್ತು ಕತೆಗಳ ಮೂಲಕ ಮೌಖಿಕವಾಗಿ ಮತ್ತು ಬರೆವಣಿಗೆಯ ರೂಪದಲ್ಲಿ ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುವುದು.**

| 9ನೇ ತರಗತಿ | ವಿಷಯ | ಪ್ರಥಮ ಭಾಷೆ ಕನ್ನಡ | ಪ್ರಾರಂಭ ದಿನಾಂಕ | | ಮುಕ್ತಾಯ ದಿನಾಂಕ | |
|---|---|---|---|---|---|---|
| ಉದ್ದೇಶಗಳು | ವಿದ್ಯಾರ್ಥಿಗಳಲ್ಲಿ ಆಲೋಚನಾ, ಚಿಂತನಾ, ಕಲ್ಪನಾ ಕೌಶಲವನ್ನು ಬೆಳೆಸುವುದು ಮತ್ತು ತಮ್ಮ ಆಲೋಚನೆಗಳನ್ನು ಪದ್ಯ ಮತ್ತು ಕಥೆಯ ರೂಪದಲ್ಲಿ ಅಭಿವ್ಯಕ್ತಪಡಿಸುವ ಸಾಮರ್ಥ್ಯವನ್ನು ಬೆಳೆಸುವುದು. ಬರೆವಣಿಗೆಯಲ್ಲಿ ಕ್ರಿಯಾತ್ಮಕ ಅಭಿವ್ಯಕ್ತಿಯನ್ನು ಮೂಡಿಸುವುದು. | | | | | |
| ಕಲಿಕಾ ಸಾಮಗ್ರಿಗಳು | ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಕಥೆ ಪುಸ್ತಕಗಳು, ಪದ್ಯಗಳು, ಪಠ್ಯಪುಸ್ತಕ. | | | | | |
| ಅವಧಿ | ಚಟುವಟಿಕೆಗಳು | ಚಟುವಟಿಕೆಯ ಉದ್ದೇಶ | ತರಗತಿ ಪ್ರಕ್ರಿಯೆ | ಮೌಲ್ಯಮಾಪನ | | ಶಿಕ್ಷಕರ ಸ್ವ ಅವಲೋಕನ |
| | | | | ಸಾಧನಗಳು | ತಂತ್ರಗಳು | |
| | **ಚಟುವಟಿಕೆ: 1** ಕಥೆಯನ್ನು ಮುಂದುವರಿಸೋಣ | ಅಪೂರ್ಣವಾದ ಕಥೆಯನ್ನು ಓದಿ ಅರ್ಥಮಾಡಿಕೊಂಡು ತನ್ನ ಆಲೋಚನೆಯನ್ನು ಸೇರಿಸಿ ಕಥೆಯನ್ನು ಪೂರ್ಣಗೊಳಿಸುವ ಕೌಶಲ ಬೆಳೆಸುವುದು. | ಮಾವಿನ ಹಣ್ಣಿಗಾಗಿ ಎಂಬ ಕಥೆಯನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಹೇಳುವುದು. ನಂತರ ಎಲ್ಲಾ ವಿದ್ಯಾರ್ಥಿಗಳಿಗೆ ಓದಲು ಅವಕಾಶವನ್ನು ನೀಡುವುದು. ನಂತರ ಕಥೆಯನ್ನು ಮುಂದುವರೆಸಲು ತಿಳಿಸಿ, ಮೌಖಿಕವಾಗಿ ಮಂಡಿಸಲು ಅವಕಾಶವನ್ನು ನೀಡುವುದು. ನಂತರ ತಾವು ಮಂಡಿಸಿದ್ದನ್ನೇ ಬರೆಯಲು ತಿಳಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ–1.1 1.2 ರಿಂದ 1.6 ರ ವರೆಗೆ | ಅವಲೋಕನ | |
| | **ಚಟುವಟಿಕೆ: 2** ಕಥೆ ಕಟ್ಟೋಣ | ಕಥೆಯನ್ನು ಕಟ್ಟುವ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವುದು. | ವಿದ್ಯಾರ್ಥಿಗಳಿಗೆ "ತಮಗೆ ಗೊತ್ತಿರುವ ಕಥೆಗಳನ್ನು ಹೇಳಲು" ಅವಕಾಶವನ್ನು ಮಾಡಿಕೊಡುವುದು. ನಂತರ ಕಪ್ಪು ಹಲಗೆಯ ಮೇಲೆ ಕಥೆಯನ್ನು ರಚಿಸುವ ಸಲುವಾಗಿ ಪ್ರಾರಂಭದಲ್ಲಿ ಆಕರ್ಷಕವಾದ ಒಂದು ಸಾಲನ್ನು ಬರೆಯುವುದು. ನಂತರ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಕಥೆಯನ್ನು ಕಟ್ಟುತ್ತಾ ಕಪ್ಪು ಹಲಗೆಯ ಮೇಲೆ ಬರೆಯುವುದು. ವಿದ್ಯಾರ್ಥಿಗಳು ಕಥೆ ಕಟ್ಟುವಲ್ಲಿ ಕಷ್ಟಪಡುತ್ತಿದ್ದರೆ ಸುಳುಹು ಪ್ರಶ್ನೆಗಳನ್ನು ಕೇಳುತ್ತಾ ಕಥೆ ಕಟ್ಟುವಲ್ಲಿ ವಿದ್ಯಾರ್ಥಿಗಳಿಗೆ ಸಹಾಯವನ್ನು ಮಾಡುವರು. ಕೊನೆಯಲ್ಲಿ ಕಥೆಗೆ ಯಾವ ಶೀರ್ಷಿಕೆಯನ್ನು ನೀಡಬಹುದು ಎಂಬುದನ್ನು ಚರ್ಚೆ ಮಾಡುವುದು. | ಕಲಿಕಾಹಾಳೆಯ ಅಭ್ಯಾಸ–2.1 | ಅವಲೋಕನ | |
| | **ಚಟುವಟಿಕೆ: 3** ನಮ್ಮ ಸನ್ನಿವೇಶ– ಪಾತ್ರಕ್ಕೆ ನಿಮ್ಮ ಕಥೆ | ಕಥೆ ರಚನೆ ಮಾಡುವ ಕೌಶಲವನ್ನು ಬೆಳೆಸುವುದು. | ಹಂತ–1 ವಿದ್ಯಾರ್ಥಿಗಳಿಗೆ ಕೆಲವು ಸನ್ನಿವೇಶ ಅಥವಾ ಪಾತ್ರಗಳನ್ನು ನೀಡಿ, ವೈಯಕ್ತಿಕವಾಗಿ ಕಥೆ ರಚನೆ ಮಾಡಲು ತಿಳಿಸುವುದು. ನಂತರ ವಿದ್ಯಾರ್ಥಿಗಳು ತಮ್ಮ ತಮ್ಮ ಕಥೆಗಳನ್ನು ಎಲ್ಲಾ ವಿದ್ಯಾರ್ಥಿಗಳ ಮುಂದೆ ಓದಲು ಅವಕಾಶವನ್ನು ನೀಡುವುದು. ಹಿಮ್ಮಾಹಿತಿ ನೀಡುವುದು. ತಮ್ಮದೇ ಆದ ಕಥೆಯನ್ನು ಬರೆಯಿರಿ ಎಂದು ತಿಳಿಸುವುದು. ನಂತರ ವಿದ್ಯಾರ್ಥಿಗಳಿಗೆ ಮಂಡನೆಗೆ ಅವಕಾಶ ಮಾಡಿಕೊಡುವರು. | ಕಲಿಕಾ ಹಾಳೆಯ ಅಭ್ಯಾಸ–3.1 ಮತ್ತು ಅಭ್ಯಾಸ 3.2 | ಅವಲೋಕನ | |

| | | | | | | |
|---|---|---|---|---|---|---|
| | **ಚಟುವಟಿಕೆ: 4** ಪದ್ಯವನ್ನು ಮುಂದುವರಿಸೋಣ | ಪದ್ಯದ ಭಾವ, ವಿಷಯ ಲಯಕ್ಕೆ ಪೂರಕವಾಗಿ ಪದ್ಯವನ್ನು ಮುಂದುವರೆಸುವ ಸಾಮರ್ಥ್ಯ ಬೆಳೆಸುವುದು. | ಮೌಖಿಕ ಪ್ರಕ್ರಿಯೆ: ಬ್ಯಾಡ್ರಳ್ಳಿ ಮುದುಕ ಪದ್ಯವನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು. ತಾಳ ಮತ್ತು ಲಯಬದ್ಧವಾಗಿ ವಿದ್ಯಾರ್ಥಿಗಳಿಗೆ ಹೇಳಿಕೊಡುವುದು. ನಂತರ ಪದ್ಯವನ್ನು ಮುಂದುವರೆಸಿ ಹಾಡುವಂತೆ ಸೂಚಿಸುವರು. ಮುಂದುರೆಸುವಾಗ ಮುದುಕನ ಅಣ್ಣ, ತಮ್ಮ, ಸೊಸೆ ಇತ್ಯಾದಿ ಸೇರಿಸಿಕೊಳ್ಳಲು ಮಕ್ಕಳಿಗೆ ಸುಳಿವನ್ನು ನೀಡುವುದು. | ಕಲಿಕಾ ಹಾಳೆಯ ಅಭ್ಯಾಸ – 4.1 ರಿಂದ 4.3 | ಅವಲೋಕನ | |
| | **ಚಟುವಟಿಕೆ: 5** ಪದ್ಯ ಕಟ್ಟೋಣ | ಪದ್ಯ ಕಟ್ಟಲು ಪ್ರೇರೆಪಿಸುವುದು. | ಹಂತ–1: ಪದ್ಯವನ್ನು ರಚಿಸಲು ಬೇಕಾದ ಸನ್ನಿವೇಶ ಅಥವಾ ಸಂದರ್ಭವನ್ನು ಆಯ್ಕೆ ಮಾಡಿಕೊಳ್ಳುವುದು. ನಂತರ ಆ ಸನ್ನಿವೇಶ ಅಥವಾ ಸಂದರ್ಭದ ಸುತ್ತಾ ಪ್ರಶ್ನೆಗಳನ್ನು ಕೇಳುತ್ತಾ ವಿದ್ಯಾರ್ಥಿಗಳ ಜೊತೆ ಸಂವಹನ ಮಾಡುವುದು. ಆ ಮೂಲಕ ವಿದ್ಯಾರ್ಥಿಗಳಲ್ಲಿ ಆ ವಿಷಯದ ವಿಸ್ತಾರ ಸಾಧ್ಯವಾಗುತ್ತದೆ. ನಂತರ ವಿದ್ಯಾರ್ಥಿಗಳಿಗೆ ಕವನ ಬರೆಯಲು ಪ್ರೇರೇಪಿಸುವುದು.<br>ಹಂತ–2: ಶಿಕ್ಷಕರು 9ನೇ ತರಗತಿಯ **'ಪ್ರಜಾನಿಷ್ಠೆ'** ಪಾಠವನ್ನು ಓದಲು ಅವಕಾಶವನ್ನು ನೀಡುವುದು. ನಂತರ ಗುಂಪಿನಲ್ಲಿ ಚರ್ಚೆ ಮಾಡಿ ಪ್ರಮುಖಾಂಶಗಳ ಪಟ್ಟಿ ಮಾಡಲು ಅವಕಾಶವನ್ನು ನೀಡುವುದು. • ಶೀರ್ಷಿಕೆಯ ಬಗ್ಗೆ • ಪಾಠದಲ್ಲಿ ಬರುವ ಪ್ರಮುಖ ಘಟನೆಗಳು • ಪಾಠದಲ್ಲಿ ಬರುವ ಪಾತ್ರಗಳು • ಪಾಠದಲ್ಲಿ ಇಷ್ಟವಾದ ಅಂಶ ವಿದ್ಯಾರ್ಥಿಗಳು ಮಂಡಿಸಿದ ನಂತರ ಅಗತ್ಯ ಹಿಮ್ಮಾಹಿತಿಯನ್ನು ನೀಡುವುದರ ಮೂಲಕ ಪಠ್ಯವನ್ನು ಅರ್ಥೈಸುವುದು. ವಿದ್ಯಾರ್ಥಿಗಳಿಗೆ 'ಹೊಯ್ಸಳ ಸಾಮ್ರಾಜ್ಯ'ದ ಕುರಿತು ಕವನವನ್ನು ಬರೆಯಲು ನಿಯೋಜಿತ ಕಾರ್ಯವನ್ನು ನೀಡುವುದು. ನಂತರ ವಿದ್ಯಾರ್ಥಿಗಳಿಗೆ ಮಂಡನೆಗೆ ಅವಕಾಶ ನೀಡಿ, ಸೂಕ್ತ ಹಿಮ್ಮಾಹಿತಿಯನ್ನು ನೀಡುವುದು. | ಕಲಿಕಾ ಹಾಳೆಯ ಅಭ್ಯಾಸ – 5.2 | ಅವಲೋಕನ | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯಲ್ಲಿನ ಅಭ್ಯಾಸ–6 ನ್ನು ಬಳಸಿಕೊಳ್ಳುವುದು.

**ನಿಯೋಜಿತ ಕಾರ್ಯಗಳು :** ವಿವಿಧ ರೀತಿಯ ಪದ್ಯ, ಕಥೆಗಳನ್ನು ನೀಡಿ, ಅದಕ್ಕೆ ಸೂಕ್ತವಾದ ಚಿತ್ರಗಳನ್ನು ಬರೆಯಲು ನಿಯೋಜಿತಕಾರ್ಯವನ್ನು ನೀಡುವುದು.
ವಿವಿಧ ರೀತಿಯ ಚಿತ್ರಗಳನ್ನು ನೀಡಿ. ಅದಕ್ಕೆ ಸೂಕ್ತವಾದ ಪದ್ಯ, ಕಥೆಗಳನ್ನು ಬರೆಯಲು ನಿಯೋಜಿತಕಾರ್ಯವನ್ನು ನೀಡುವುದು.
ಕೆಲವು ಸನ್ನಿವೇಶ ಕೊಟ್ಟು ಕವನ ಮತ್ತು ಕಥೆ ಬರೆಯಲು ಸೂಚಿಸುವುದು. ಹಾಗೂ ವಿದ್ಯಾರ್ಥಿಗಳಿಗೆ ಇಷ್ಟವಾದ ವಿಷಯದ ಮೇಲೆ ಮುಕ್ತವಾಗಿ ಕಥೆ ಮತ್ತು ಕವನ ಬರೆಯಲು ನಿಯೋಜಿತಕಾರ್ಯ ನೀಡುವುದು.

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

<table>
<tr><td colspan="9">ಕಲಿಕಾ ಫಲ–13<br>ತಹಶೀಲ್ದಾರರಿಗೆ ಮನವಿಪತ್ರ, ಬ್ಯಾಂಕುಗಳಿಗೆ ಅರ್ಜಿ, ಆರಕ್ಷಕ ಠಾಣೆಗೆ ದೂರು ಪತ್ರಗಳು ಇತ್ಯಾದಿಗಳನ್ನು ಸ್ವತಂತ್ರವಾಗಿ ಬರೆಯುವುದು.</td></tr>
<tr><td>9ನೇ ತರಗತಿ</td><td>ವಿಷಯ</td><td>ಪ್ರಥಮ ಭಾಷೆ ಕನ್ನಡ</td><td>ಪ್ರಾರಂಭ ದಿನಾಂಕ</td><td></td><td>ಮುಕ್ತಾಯ ದಿನಾಂಕ</td><td colspan="3"></td></tr>
<tr><td>ಉದ್ದೇಶಗಳು</td><td colspan="8">ವಿದ್ಯಾರ್ಥಿಗಳು ತಮ್ಮ ಆಲೋಚನೆಗೆ ಅನುಸಾರವಾಗಿ ಸಾಮಾಜಿಕ ಮತ್ತು ವೈಯಕ್ತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಸ್ವತಂತ್ರ ಆಲೋಚನೆಗಳೊಂದಿಗೆ ಅರ್ಜಿ, ದೂರು ಮನವಿಪತ್ರಗಳನ್ನು ಬರೆಯುವ ಕಲೆಯನ್ನು ರೂಢಿಸಿಸುವುದು.</td></tr>
<tr><td>ಕಲಿಕಾ ಸಾಮಗ್ರಿಗಳು</td><td colspan="8">ಅಭ್ಯಾಸ ಹಾಳೆಗಳು, ಚಿತ್ರಗಳು, ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿ, ಮೌಲ್ಯಮಾಪನ ಹಾಳೆಗಳು, ಪ್ರಶ್ನೆಗಳ ಚಾರ್ಟ್, ಮಾದರಿ ಪತ್ರಗಳು.</td></tr>
<tr><td rowspan="2">ಅವಧಿ</td><td rowspan="2">ಚಟುವಟಿಕೆಗಳು</td><td rowspan="2">ಚಟುವಟಿಕೆಯ ಉದ್ದೇಶ</td><td rowspan="2">ತರಗತಿ ಪ್ರಕ್ರಿಯೆ</td><td colspan="2">ಮೌಲ್ಯಮಾಪನ</td><td rowspan="2">ಶಿಕ್ಷಕರ ಸ್ವ ಅವಲೋಕನ</td></tr>
<tr><td>ಸಾಧನಗಳು</td><td>ತಂತ್ರಗಳು</td></tr>
<tr><td rowspan="2"></td><td>ಚಟುವಟಿಕೆ: 1<br>ಪತ್ರಗಳನ್ನೊಮ್ಮೆ ಇಣುಕಿ ನೋಡೋಣ</td><td>ಪತ್ರಗಳನ್ನು ಓದುತ್ತಾ ಪತ್ರಗಳ ಸ್ವರೂಪಗಳನ್ನು ತಿಳಿಯುವುದು</td><td>ಹಂತ – 1: ಪತ್ರಗಳ ಬಗ್ಗೆ ಪೂರ್ವ ಮಾತುಕಥೆ<br>ವಿದ್ಯಾರ್ಥಿಗಳಿಗೆ ಪರಿಚಿತವಿರುವ ಪತ್ರಗಳ ಬಗೆಗೆ ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಾ ತರಗತಿಯನ್ನು ಆರಂಭಿಸುವುದು. ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೇಳುತ್ತಾ ಪತ್ರಗಳ ಸ್ವರೂಪವನ್ನು ವಿವರಿಸುವುದು.<br>ಹಂತ – 2: ಗುಂಪಿನಲ್ಲಿ ಪತ್ರ ಓದೋಣ<br>ತರಗತಿಯ ವಿದ್ಯಾರ್ಥಿಗಳನ್ನು 2 ಗುಂಪುಗಳನ್ನಾಗಿ ವಿಂಗಡಿಸಿ, ಪ್ರತಿ ಗುಂಪಿಗೂ ಎರಡು ಮಾದರಿ ಪತ್ರಗಳನ್ನು ಕೊಟ್ಟು ಗುಂಪಿನಲ್ಲಿ ಚರ್ಚಿಸುವಂತೆ ತಿಳಿಸುವುದು.<br>ಹಂತ–3: ಮಂಡನೆ<br>ವಿದ್ಯಾರ್ಥಿಗಳು ಪಟ್ಟಿ ಮಾಡಿಕೊಂಡಿರುವ ಅಂಶಗಳನ್ನು ಪ್ರತಿ ಗುಂಪಿನಿಂದ ಒಬ್ಬರು ಮಂಡಿಸುವಂತೆ ಸೂಚಿಸುವುದು. • ಉಳಿದ ವಿದ್ಯಾರ್ಥಿಗಳು ಪ್ರಶ್ನೆ ಕೇಳಲು ಮತ್ತು ತಮ್ಮ ಅಭಿಪ್ರಾಯ ಹೇಳಲು ಅವಕಾಶ ಮಾಡಿಕೊಡುವುದು. • ವಿದ್ಯಾರ್ಥಿಗಳ ಮಂಡನೆ ಮುಗಿದ ನಂತರ ವಿದ್ಯಾರ್ಥಿಗಳು ಹೇಳಿದ ಅಂಶಗಳನ್ನು ಪರಿಗಣಿಸಿ, ಪ್ರಶ್ನೆಗಳನ್ನು ಕೇಳುತ್ತಾ ಎರಡೂ ಪತ್ರಗಳ ಸ್ವರೂಪ ಮತ್ತು ವ್ಯತ್ಯಾಸವನ್ನು ಕುರಿತು ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು.</td><td>ಕಲಿಕಾಹಾಳೆಯಲ್ಲಿನ ಅಭ್ಯಾಸ–1.1</td><td>ಅವಲೋಕನ</td><td></td></tr>
<tr><td>ಚಟುವಟಿಕೆ: 2<br>ಪತ್ರವೊಂದನ್ನು ಬರೆಯಲು ಸಹಾಯ ಮಾಡೋಣ.</td><td>ವಿದ್ಯಾರ್ಥಿಗಳು ಅಪೂರ್ಣಗೊಂಡ ಪತ್ರವೊಂದನ್ನು ಪೂರ್ಣಗೊಳಿಸುವುದು.</td><td>ವಿದ್ಯಾರ್ಥಿಗಳನ್ನು ಕುರಿತು, ರಂಗಣ್ಣನು ತನ್ನ ಮನೆಗೆ ಕೊಳಾಯಿ ನೀರಿನ ಸಂಪರ್ಕವಿಲ್ಲದೆ ಪ್ರತಿದಿನ 1 ಕಿ.ಮೀ ದೂರದಿಂದ ನೀರನ್ನು ತರುತ್ತಾ ಬಹಳ ಕಷ್ಟ ಪಡುತ್ತಿದ್ದಾರೆ. ಅದಕ್ಕೆ ಹುಣಸೇಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಲು ಪ್ರಯತ್ನಿಸುತ್ತಿದ್ದಾರೆ. ನೀವು ರಂಗಣ್ಣನಿಗೆ ಪತ್ರ ಬರೆಯಲು ಸಹಕರಿಸಿ ಎಂದು ಸೂಚಿಸುವುದು. ಎಲ್ಲಾ ವಿದ್ಯಾರ್ಥಿಗಳಿಗೆ ತಾವು ಬರೆದಿರುವ ಪತ್ರವನ್ನು ಮಂಡಿಸಲು ಅವಕಾಶವನ್ನು ನೀಡಿ, ಮಂಡಿಸಿದ ನಂತರ ಹಿಮ್ಮಾಹಿತಿಯನ್ನು ನೀಡುವುದು.</td><td>ಕಲಿಕಾ ಹಾಳೆಯಲ್ಲಿನ ಅಭ್ಯಾಸ –2.1</td><td>ಅವಲೋಕನ</td><td></td></tr>
</table>

| | | | | | | |
|---|---|---|---|---|---|---|
| | **ಚಟುವಟಿಕೆ: 3** ಪತ್ರಕ್ಕೊಂದು ವಿಷಯ ಹುಡುಕೋಣ | ವ್ಯವಹಾರಿಕ ಪತ್ರ ಬರೆಯುವ ಉದ್ದೇಶಗಳನ್ನು ಅರ್ಥೈಸಿಕೊಳ್ಳುವುದು. | ಹಂತ–1. ತರಗತಿ ವಿದ್ಯಾರ್ಥಿಗಳನ್ನು ಸಂಖ್ಯೆಗನುಗುಣವಾಗಿ 3–4 ಗುಂಪುಗಳನ್ನಾಗಿ ವಿಂಗಡಿಸಿ ಕೆಳಗಿನ ಅಂಶಗಳನ್ನು ಗುಂಪಿನಲ್ಲಿ ಚರ್ಚಿಸಿ ಪಟ್ಟಿ ಮಾಡಿಕೊಳ್ಳುವಂತೆ ಸೂಚಿಸುವರು. ನಿಮ್ಮ ಊರಿನಲ್ಲಿ ಇರುವ ಸಾಮಾಜಿಕ ಸಮಸ್ಯೆಗಳನ್ನು ಪಟ್ಟಿ ಮಾಡುವುದು. ನಿಮ್ಮ ಮನೆ ಅಥವಾ ಅಕ್ಕ ಪಕ್ಕದ ಮನೆಯವರಿಗೆ ಎದುರಾಗಿರುವ ತೊಂದರೆಗಳು ಹಾಗೂ ಸಮಸ್ಯೆಗಳನ್ನು ಪಟ್ಟಿ ಮಾಡುವುದು. ನೀವು ಪಟ್ಟಿ ಮಾಡಿರುವ ಸಮಸ್ಯೆಗಳನ್ನು ಸರಿಪಡಿಸಲು ನೀವು ಯಾವ ಮಾರ್ಗಗಳನ್ನು ಕೈಗೊಳ್ಳುವಿರಿ. ಮತ್ತು ಯಾರಿಗೆ ಪತ್ರ ಬರೆಯುವಿರಿ.<br>ಹಂತ – 2 ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಪಟ್ಟಿ ಮಾಡಿಕೊಂಡ ಅಂಶಗಳನ್ನು, ಪ್ರತಿ ಗುಂಪಿನವರು ಮಂಡಿಸುವಂತೆ ಸೂಚಿಸುವುದು. ಒಂದು ಗುಂಪು ತಮ್ಮ ವಿಷಯಗಳನ್ನು ಮಂಡಿಸಿದ ಬಳಿಕ, ಉಳಿದ ಗುಂಪುಗಳು ಆ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಡುವುದು. ವಿದ್ಯಾರ್ಥಿಗಳ ಗುಂಪುಗಳ ಚರ್ಚೆಯ ಬಳಿಕ ಶಿಕ್ಷಕರು ವಿದ್ಯಾರ್ಥಿಗಳ ಅನಿಸಿಕೆ, ಅಭಿಪ್ರಾಯಗಳನ್ನು ಆಧಾರಿಸಿ ಯಾವ ಸಮಸ್ಯೆಗಳು ಪತ್ರ ಬರೆವಣಿಗೆಗೆ ಯೋಗ್ಯವೆನಿಸುತ್ತವೆ? ವಿಷಯಾನುಸಾರ ಯಾವ ಪತ್ರಗಳನ್ನು ಯಾರಿಗೆ ಬರೆಯಬೇಕು? ಎಂಬ ಇತ್ಯಾದಿ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು. | ಮಾದರಿ ಪತ್ರಗಳು | ಅವಲೋಕನ | |
| | **ಚಟುವಟಿಕೆ: 4** ಪತ್ರ ಬರೆಯೋಣ | ವಿವಿಧ ಉದ್ದೇಶಗಳಿಗೆ ಅನುಗುಣವಾಗಿ ಪತ್ರ ಬರೆಯುವುದು. | ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಿ, ಪ್ರತಿ ಗುಂಪಿಗೂ ಒಂದೊಂದು ಸನ್ನಿವೇಶವನ್ನು ನೀಡಿ ಪತ್ರ ಬರೆಯಲು ಸೂಚಿಸುವುದು. | ಕಲಿಕಾ ಹಾಳೆಯಲ್ಲಿನ ಅಭ್ಯಾಸ 4.1 | ಅವಲೋಕನ | |
| | **ಚಟುವಟಿಕೆ: 5** ಅಂತರ್ಜಾಲದಲ್ಲೊಂದು ಪತ್ರ | ಇ–ಮೇಲ್ ಮತ್ತು ವಾಟ್ಸಪ್ ಸಂದೇಶ ಮತ್ತು ಪತ್ರಗಳ ಸ್ವರೂಪಗಳನ್ನು ತಿಳಿಯುವುದು. | ಇ–ಮೇಲ್ ಮತ್ತು ವಾಟ್ಸಪ್‌ಗಳಲ್ಲಿ ಹೇಗೆ ಪತ್ರವ್ಯವಹಾರಗಳು ನಡೆಯುತ್ತವೆ ಎಂಬುದನ್ನು ಕೆಳಗಿನ ಪ್ರಶ್ನೆಗಳನ್ನು ಕೇಳುವ ಮೂಲಕ ಅರ್ಥೈಸುವರು. ಉದಾಹರಣೆ ಪ್ರಶ್ನೆಗಳು • ನೀವು ಮೊಬೈಲ್‌ನಲ್ಲಿ ವಾಟ್ಸಪ್ ಮೂಲಕ ಸಂದೇಶಗಳನ್ನು ಕಳುಹಿಸಿದ್ದೀರಾ? • ಸಂದೇಶ ಕಳುಹಿಸಿದ್ದರೆ, ಏನು ಬರೆದು ಕಳುಹಿಸಿದ್ದೀರಿ ತಿಳಿಸಿ? • ಇ–ಮೇಲ್ ಕಳುಹಿಸಿದ್ದೀರಾ? ಇ–ಮೇಲ್ ಬಗ್ಗೆ ನಿಮಗೆ ತಿಳಿದಿರುವ ವಿಷಯಗಳನ್ನು ಹಂಚಿಕೊಳ್ಳಿ. ಶಿಕ್ಷಕರು ಮೇಲಿನ ಪ್ರಶ್ನೆಗಳಿಗೆ ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಆಲಿಸಿ, ವಾಟ್ಸಪ್ ಮತ್ತು ಇ–ಮೇಲ್‌ಗಳ ಸ್ವರೂಪಗಳನ್ನು ವಿವರಿಸುವುದು. | ಹಾಳೆಯಲ್ಲಿನ ಅಭ್ಯಾಸ–5.1 ಮತ್ತು 5.2 | | |

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆಯ ಅಭ್ಯಾಸ–6 ಸನ್ನಿವೇಶವನ್ನು ನೀಡಿ ಪತ್ರ ಬರೆಯಲು ಸೂಚಿಸುವುದು.

**ನಿಯೋಜಿತ ಕಾರ್ಯಗಳು :** ಶಿಕ್ಷಕರು ಪತ್ರ ಬರೆಯಲು ಸ್ಥಳೀಯ ಸನ್ನಿವೇಶಗಳನ್ನು ಆಯ್ಕೆ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಮನವಿಪತ್ರ, ಅರ್ಜಿ, ದೂರುಪತ್ರಗಳನ್ನು ಬರೆಯಲು ನಿಯೋಜಿತ ಕಾರ್ಯವನ್ನು ನೀಡುವುದು.

ವಿಷಯ ಶಿಕ್ಷಕರ ಸಹಿ　　　　　　　　ಮುಖ್ಯ ಶಿಕ್ಷಕರ ಸಹಿ